ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 18 RNI Number : KNKAN/25/A2770 20-01-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :18 ರಾಯಚೂರು 20-01-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಸಿಎಂ ಸೇರಿದಂತೆ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ: ಡಿ.ಕೆ.ಶಿ



ಬೆಂಗಳೂರು: ''ಸಿಎಂ ಸೇರಿ ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ. ನಮ್ಮ ನಡುವೆ ಏನು ಚರ್ಚೆಯಾಗಿದೆ ಎಂದು ನಮಗೆ ಗೊತ್ತು, ಇದನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ನಿಮ್ಮ ಬೆಂಬಲಿಗರು ಹೈಕಮಾಂಡ್ ತೀರ್ಮಾನದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ''ಯಾರು ಹೇಳಿದರು? 140 ಶಾಸಕರು ಕೂಡ ನನ್ನ ಬೆಂಬಲಿಗರೇ. ಸಿಎಂ ಸಿದ್ದರಾಮಯ್ಯ ಅವರು ಕೂಡ ನನಗೆ ಬೆಂಬಲವಾಗಿದ್ದಾರೆ. ನಾನು ಹಾಗೂ ಸಿಎಂ ಅವರು ಏನು ಮಾತನಾಡಿದ್ದೇವೆ ಎಂದು ನಿಮಗೆ ಗೊತ್ತಿದೆಯಾ? ರಾಹುಲ್ ಗಾಂಧಿ ಸಮ್ಮುಖದಲ್ಲಿ ನಾವು ಏನು ಮಾತನಾಡಿಕೊಂಡಿದ್ದೇವೆ, ಹೈಕಮಾಂಡ್ ಸಮ್ಮುಖದಲ್ಲಿ ಏನು ಮಾತನಾಡಿದ್ದೇವೆ, ಎಲ್ಲ ಕೂತು ಏನು ತೀರ್ಮಾನ ಮಾಡಿದ್ದೇವೆ ಎಂದು ನಮಗೆ ಗೊತ್ತಿದೆ. ಈ ವಿಚಾರವನ್ನು ನಿಮ್ಮ ಮುಂದೆ ಬಹಿರಂಗವಾಗಿ ಚರ್ಚೆ ಮಾಡಲು ಸಾಧ್ಯವೇ? ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ'' ಎಂದರು.

ದೆಹಲಿ ಭೇಟಿ ಬಗ್ಗೆ ಮಾತನಾಡಿ ''ನಾವು ದೆಹಲಿಗೆ ಹೋಗುವುದೇ ರಾಜಕೀಯ, ಪಕ್ಷ ಹಾಗೂ ಸರ್ಕಾರದ ಕೆಲಸಗಳಿಗೆ. ಮಾಧ್ಯಮಗಳು ರಾಹುಲ್ ಗಾಂಧಿ ಭೇಟಿಯಾಗಿಲ್ಲ ಎಂದು ಬರೆದಿದ್ದೀರಿ. ಒಂದು ದಿನ ನಾವು ಜೊತೆಯಲ್ಲಿ ಕೂತು ಚರ್ಚೆ ಮಾಡಿರುವ ಫೋಟೋ ವರದಿ ಮಾಡಿದ್ದೀರಿ, ಮರುದಿನ ಭೇಟಿಯೇ ಆಗಿಲ್ಲ ಎಂದು ಹೇಳುತ್ತಿದ್ದೀರಿ. ಈ ವಿಚಾರದಲ್ಲಿ ಕಾಲವೇ ಉತ್ತರ ನೀಡಲಿದೆ ಎಂದು ಹೇಳಿದ್ದೇನೆ. ಇದರ ಹೊರತಾಗಿ ನಾನು ಬೇರೆ ವಿಚಾರ ಚರ್ಚೆ ಮಾಡುವುದಿಲ್ಲ'' ಎಂದು ತಿಳಿಸಿದರು.

ಹೈಕಮಾಂಡ್ ಒಳ್ಳೆಯ ಸುದ್ದಿ ನೀಡಲಿದೆ ಎಂದು ನಿಮ್ಮ ಸಹೋದರ ಹೇಳಿದ್ದಾರೆ ಎಂದು ಕೇಳಿದಾಗ, ''ನನ್ನ ತಮ್ಮ, ನಮ್ಮ ಕಾರ್ಯಕರ್ತರು, ಮಾಧ್ಯಮಗಳು ಕೂಡ ಹೇಳುತ್ತಿವೆ'' ಎಂದರು.

ಒಂದೇ ಬಾರಿಗೆ ಎಲ್ಲಾ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಚಿಂತನೆ: ''ನ್ಯಾಯಾಲಯ ಆದೇಶ ನೀಡಿದೆ. ನಮ್ಮ ಸರ್ಕಾರ ಸಂವಿಧಾನದ 73, 74ನೇ ತಿದ್ದುಪಡಿಗೆ ಬದ್ಧವಾಗಿದೆ. ಯುವಕರಿಗೆ ಅಧಿಕಾರ ನೀಡಬೇಕು, ಹೊಸ ಪೀಳಿಗೆ ಅಧಿಕಾರಕ್ಕೆ ಬರಬೇಕು. ಈಗ ಐದು ಪಾಲಿಕೆಗಳಿಂದ 369 ವಾರ್ಡ್‌ಗಳನ್ನು ರಚಿಸಲಾಗಿದೆ. ಇನ್ನು ಬೆಂಗಳೂರಿನ ಹೊರವಲಯವನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳುವ ಬಗ್ಗೆ ಚರ್ಚೆ ನಡೆಯುತ್ತಿದೆ'' ಎಂದರು.

''ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆ ನಡೆಸಲು ನಮ್ಮ ಸರ್ಕಾರ ತೀರ್ಮಾನಿಸಿದೆ. ಇವುಗಳಿಗೆ ಇದ್ದ ಮೀಸಲಾತಿ ಸಮಸ್ಯೆ ಬಗೆಹರಿಸಲು ಸಿಎಂ ಹಾಗೂ ಸಚಿವರು ತಿಳಿಸಿದ್ದಾರೆ. ಗ್ರಾಮ ಪಂಚಾಯತ್ ಚುನಾವಣೆಗಳನ್ನೂ ಪಕ್ಷದ ಚಿಹ್ನೆ ಮೇಲೆ ನಡೆಸಬೇಕು ಎಂದು ಅನೇಕರು ಸಲಹೆ ನೀಡಿದ್ದು, ನಾವಿನ್ನೂ ಆ ಬಗ್ಗೆ ತೀರ್ಮಾನ ಮಾಡಿಲ್ಲ. ಒಂದೇ ಬಾರಿಗೆ ಎಲ್ಲವನ್ನು ನಡೆಸಲು ಚಿಂತನೆ ನಡೆಯುತ್ತಿದೆ'' ಎಂದು ಹೇಳಿದರು.

ಈ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮತಯಂತ್ರದ ಹೊರತಾಗಿ ಮತಪತ್ರ ಬಳಸುವ ಬಗ್ಗೆ ಪ್ರತಿಕ್ರಿಯಿಸುತ್ತಾ, ''ನನಗೂ ಈ ಬಗ್ಗೆ ಮಾಹಿತಿ ಬಂದಿದೆ. ಇದು ರಾಜ್ಯ ಚುನಾವಣಾ ಆಯೋಗಕ್ಕೆ ಬಿಟ್ಟ ವಿಚಾರ. ಮತಪತ್ರ ಬಳಸುವುದರಲ್ಲಿ ತಪ್ಪೇನು ಇಲ್ಲ. ಯಾವ ರೂಪದಲ್ಲಿ ಚುನಾವಣೆ ನಡೆಸಲಾಗುವುದು ಎನ್ನುವುದಕ್ಕಿಂತ ಮತದಾನ ನಡೆಯುವುದು ಬಹಳ ಮುಖ್ಯ. ಈಗ ಕರಡು ಮತದಾರರ ಪಟ್ಟಿ ಬಿಡುಗಡೆಯಾಗಿದ್ದು, ನಾವು ಈಗಾಗಲೇ ಬಿಎಲ್ಎಗಳ ಸಿದ್ಧತೆ ಮಾಡಿಕೊಂಡಿದ್ದೇವೆ. ಯಾವುದೇ ಮತದಾರರ ಹೆಸರು ಪಟ್ಟಿಯಲ್ಲಿ ಬಿಟ್ಟುಹೋಗಿದ್ದರೆ ಅವರಿಗೆ ಮತ್ತೆ ಅವಕಾಶ ಕಲ್ಪಿಸಬೇಕು ಹಾಗೂ ಅವರ ಹಕ್ಕನ್ನು ಅವರಿಗೆ ನೀಡಬೇಕು. ಅಧಿಕಾರಿಗಳ ಕಾರ್ಯದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ.

3ನೇ ಪುಟಕ್ಕೆ

ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ: ರಾಯಚೂರು ತಂಡಕ್ಕೆ ದ್ವಿತೀಯ ಸ್ಥಾನ



ರಾಯಚೂರು/ಶಿವಮೊಗ್ಗ,ಜ.19-

ಶಿವಮೊಗ್ಗ ಪ್ರೆಸ್ ಟ್ರಸ್ಟ್ ಆಯೋಜಿಸಿದ್ದ ರಾಜ್ಯಮಟ್ಟದ ಅಂತರಜಿಲ್ಲಾ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಪತ್ರಕರ್ತರ ತಂಡ ದ್ವಿತೀಯ ಸ್ಥಾನ ಪಡೆದು ಕೊಂಡಿದೆ.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜು ಕ್ರೀಡಾಂಗಣದಲ್ಲಿ ನಡೆದ ಪಂದ್ಯಾವಳಿಯಲ್ಲಿ ರಾಯಚೂರು ತಂಡ ಶಕ್ತಿಯುತ ಪ್ರದರ್ಶನ ನೀಡುತ್ತಾ ಫೈನಲ್ಗೆ ಪ್ರವೇಶಿಸಿತು. ಅಂತಿಮ ಪಂದ್ಯದಲ್ಲಿ ಶಿವಮೊಗ್ಗ ಪ್ರೆಸ್ ಟ್ರಸ್ಟ್ ತಂಡ ಜಯಗಳಿಸಿ ಪ್ರಥಮ ಸ್ಥಾನ ಪಡೆದುಕೊಂಡರೆ, ರಾಯಚೂರು ರಿಪೋರ್ಟರ್ಸ್ ಗಿಲ್ಡ್ ತಂಡ ದ್ವಿತೀಯ ಸ್ಥಾನ ಮತ್ತು ದಾವಣಗೆರೆ ಪತ್ರಕರ್ತರ ತಂಡ ತೃತೀಯ ಸ್ಥಾನ ಗಳಿಸಿತು.

ಪ್ರಥಮ ಸ್ಥಾನಕ್ಕೆ ಟ್ರೋಫಿ ಜೊತೆಗೆ ₹25,000 ನಗದು ಬಹುಮಾನ, ದ್ವಿತೀಯ ಸ್ಥಾನಕ್ಕೆ ಟ್ರೋಫಿ ಜೊತೆಗೆ ₹15,000 ಮತ್ತು ತೃತೀಯ ಸ್ಥಾನಕ್ಕೆ ಟ್ರೋಫಿ ಜೊತೆಗೆ ₹10,000

3ನೇ ಪುಟಕ್ಕೆ



ವೇಮನರ ನಾಮಪಲಕಕ್ಕೆ ಮಾಲಾರ್ಪಣೆ


ಸಿರವಾರ.ಜ.19-

ಮಹಾಶಿವಯೋಗಿ ವೇಮನ ಜಯಂತಿ ಅಂಗವಾಗಿ ಸಿರವಾರ ಪಟ್ಟಣದ ಪಿಡಬ್ಲ್ಯೂಡಿ ಕ್ಯಾಂಪಿನ ಎದುರಗಡೆ ಇರುವ ಮಹಾ ಶಿವಯೋಗಿ ನಾಮಪಲಕಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ, ಪುಷ್ಪಾರ್ಪಣೆ ಮಾಡುವ ಮೂಲಕ ಸರಳವಾಗಿ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪ.ಪಂ ಮಾಜಿ ಅಧ್ಯಕ್ಷ ವೈ.ಭೂಪನಗೌಡ, ಉಪಾಧ್ಯಕ್ಷೆ ಲಕ್ಷ್ಮೀ ಆದೇಪ್ಪ, ಮುಖಂಡರಾದ ಟಿ.ಆರ್. ಪಾಟೀಲ್, ಬಸ್ಸಪ್ಪಗೌಡ ನಂದರೆಡ್ಡಿ, ಜಿ.ಲೋಕರಡ್ಡಿ, ಟಿ.ಬಸವರಾಜ, ಜೆ.ದೇವರಾಜಗೌಡ, ಶಿವಶರಣಗೌಡ ಲಕ್ಕಂದಿನ್ನಿ, ನಾಗಪ್ಪಗೌಡ ಚಾಗಭಾವಿ, ಎಂ.ನಾಗರಾಜಗೌಡ, ಪ್ರಕಾಶ ಪಾಟೀಲ,ವಿಜಯಕುಮಾರ ಗುಡ್ಡದಮನೆ, ಶಿವರಾಜಗೌಡ ಬೆಳವಿನೂರು, ಪರಮೇಶಪ್ಪ, ವೆಂಕಟರಡ್ಡಿ, ಮಲಯ್ಯಸ್ವಾಮಿ, ಚೆನ್ನಪ್ಪ ಸಾಹುಕಾರ ನಾಗೋಲಿ, ಪ.ಪಂ

3ನೇ ಪುಟಕ್ಕೆ

ಪತ್ರಕರ್ತ ಸೈಯದ್ ನಯೀಮ್ ಅಶ್ರಫ್ ಅವರಿಗೆ ಶ್ರದ್ಧಾಂಜಲಿ
ಪತ್ರಕರ್ತರ ಅಕಾಲಿಕ ಸಾವುಗಳು ಆತಂಕಕಾರಿ: ಆರ್.ಗುರುನಾಥ



ರಾಯಚೂರು,ಜ.19-

ಈಚೆಗೆ ನಿಧನರಾದ ಉರ್ದು ಸುದ್ದಿ ವಾಹಿನಿಯ ವರದಿಗಾರರು ಹಾಗೂ ಹಿರಿಯ ಪತ್ರಕರ್ತರಾದ ಸೈಯದ್ ನಯೀಮ್ ಅಶ್ರಫ್ ಅವರಿಗೆ ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೃತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಒಂದು ನಿಮಿಷ ಮೌನಾಚರಣೆ ನಡೆಸಲಾಯಿತು. ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಆರ್.ಗುರುನಾಥ ಮಾತನಾಡಿ, ಪತ್ರಕರ್ತರು ತೀವ್ರ ಕೆಲಸದ ಒತ್ತಡದ ನಡುವೆ ಕಾರ್ಯನಿರ್ವಹಿಸುತ್ತಿದ್ದು, ಆರೋಗ್ಯದ ಕಡೆಗೂ ಸಮಾನ ಗಮನ ಅಗತ್ಯವಿದೆ ಎಂದು ಹೇಳಿದರು.

ಉರ್ದು ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದ ನಯೀಮ್ ಅಶ್ರಫ್ ಅವರು ಆರೋಗ್ಯವನ್ನು ಲೆಕ್ಕಿಸದೆ ನಿರಂತರವಾಗಿ ದುಡಿದುಕೊಂಡಿದ್ದರು. ಇತ್ತೀಚೆಗೆ ವರ್ಗಾವಣೆಗೊಂಡಿದ್ದರಿಂದ ಹೈದರಾಬಾದ್-ರಾಯಚೂರು ನಡುವೆ ನಿರಂತರ ಪ್ರಯಾಣ ಮಾಡುತ್ತಿದ್ದರು. ಇನ್ನೂ ಕುಟುಂಬದ ಅನೇಕ ಜವಾಬ್ದಾರಿಗಳನ್ನು

3ನೇ ಪುಟಕ್ಕೆ

ಶ್ರೀ ಮಾದಾರ ಚನ್ನಯ್ಯ ಸೇವಾ ಸಮಿತಿ ರಾಯಚೂರು ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ಅಧ್ಯಕ್ಷರಾಗಿ ರಾಘವೇಂದ್ರ ಬೋರೆಡ್ಡಿ ಆಯ್ಕೆ



ರಾಯಚೂರು,ಜ.19-

ಶ್ರೀ ಮಾದಾರ ಚನ್ನಯ್ಯ ಸೇವಾ ಸಮಿತಿ ರಾಯಚೂರು ಜಿಲ್ಲೆಯ ರಾಯ ಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಪದಾಧಿಕಾರಿಗಳ ಸಭೆಯು ನಗರದ ಮನೋರಂಜನ ಕೇಂದ್ರದಲ್ಲಿ ನಡೆಯಿತು. ಸಭೆಯಲ್ಲಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಪದಾಧಿಕಾರಿಗಳ ನೇಮಕ ಹಾಗೂ ಸೇವಾ ಸಮಿತಿಯ ಕಾರ್ಯ ಯೋಜನೆ ಗಳು ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಲಾಯಿತು.

ಶ್ರೀ ಮಾದರ ಚೆನ್ನಯ್ಯ ಸೇವಾ ಸಮಿತಿ ರಾಜ್ಯಾಧ್ಯಕ್ಷರಾದ ಮಂಜುನಾಥ್ ಹೂಡಿ ರಾಜ್ಯ ಗೌರವ ಸಲಹೆಗಾರರಾದ ರವೀಂದ್ರ ಜಲ್ದಾರ್ ರಾಜ್ಯ ಉಪಾಧ್ಯಕ್ಷರಾದ ಜೆ.ಎಂ.ವೀರೇಶ ಇವರ ಶಿಫಾರಸ್ಸಿನ ಮೇರೆಗೆ ಸಭೆಯಲ್ಲಿ ಸೇವಾ ಸಮಿತಿಯ ರಾಯಚೂರು ಜಿಲ್ಲೆಯ ಅಧ್ಯಕ್ಷರಾದ ಜೆ.ಎಂ.ಮೌನೇಶ ಇವರು ಸಭೆಯಲ್ಲಿ ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರನ್ನಾಗಿ ಮಾದಿಗ ಸಮಾಜದ ಯುವ ಮುಖಂಡರು ಒಳ ಮೀಸಲಾತಿ ಹೋರಾಟಗಾರು ಹಾಗೂ ಮನ್ನಲಾಪೂರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಆದ ರಾಘವೇಂದ್ರ ಬೋರೆಡ್ಡಿ ಇವರನ್ನು ಸೇವಾ ಸಮಿತಿಯ ರಾಯಚೂರು ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿ ಘೋಷಣೆ ಮಾಡಿದರು. ಸೇವಾ ಸಮಿತಿಯ ರಾಜ್ಯ ಗೌರವ ಸಲಹೆಗಾರರಾದ ರವೀಂದ್ರ ಜಲ್ದಾರ್ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಶ್ರೀಮಠದ ಸೇವಾ ಸಮಿತಿಯ ಾರ್ಯಯೋಜನೆಗಳು ಮುಂದಿನ

ಚಟುವಟಿಕೆಗಳು ಹಾಗೂ ಬಲಿಷ್ಠ ಸಮಾಜ ನಿರ್ಮಿಸಲು ಸೇವಾ ಸಮಿತಿಯ ಪ್ರತಿಯೊಬ್ಬರು ಕಂಕಣ ಬದ್ದರಾಗಿ ಕೆಲಸ ಮಾಡಬೇಕೆಂದು ಕರೆ ನೀಡಿದರು.ಮುಖ್ಯ ಭಾಷಣ ಮಾಡಿದ ರಾಜ್ಯ ಉಪಾಧ್ಯಕ್ಷರಾದ

3ನೇ ಪುಟಕ್ಕೆ

ಪಿಕಳಿಹಾಳ ಗ್ರಾಮದಲ್ಲಿ 5 ದಿನಗಳ ಆಧ್ಯಾತ್ಮಿಕ ಪ್ರವಚನ ಪ್ರಾರಂಭ
ಪುರಾಣ, ಪ್ರವಚನ ಶ್ರವಣದಿಂದ ಮನುಷ್ಯನಲ್ಲಿ ಶಾಂತಿ, ನೆಮ್ಮದಿ ಅಭಿವೃದ್ದಿ : ತಡಕಲ ಶಾಸ್ತ್ರಿಗಳು



ರಾಯಚೂರು,ಜ.19-

ನಗರದ ಪಂ. ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕಲಾ ಸಂಕುಲ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ರೇಖಾ ಮಾರುತಿ ಬಡುಗೇರ, ಸಂಸ್ಥೆಯ ಕಾರ್ಯದರ್ಶಿ ಮಾರುತಿ ಬಡಿಗೇರರವರ ನೇತೃತ್ವದಲ್ಲಿ ಸಂಕ್ರಾಂತಿ ಸಂಭ್ರಮ ಹಾಗೂ ಪುಸ್ತಕ ಸಂತೆ ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಟಮಾರಿ ಶಿವಾನಂದ

3ನೇ ಪುಟಕ್ಕೆ

ಪುಸ್ತಕಗಳು ಸಮಾಜದ ಜ್ಞಾನ ವಾಹಿನಿ ಪ್ರೊ ಶಿವಾನಂದ ಕೆಳಗಿನಮನಿ-ಪುಸ್ತಕ ಸಂತೆ ಸಂಕ್ರಾಂತಿ ಸಂಭ್ರಮ

ರಾಯಚೂರು,ಜ.19-

ಪುಸ್ತಕಗಳು ಸಮಾಜದ ಜ್ಞಾನ ವಾಹಿನಿಯಂತೆ ಅವು ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಪ್ರವಹಿಸುವ ಸುಲಭವಾದ ಸಾಧನೆಗಳು ಪುಸ್ತಕಗಳು ಜ್ಞಾನದ ಭಂಡಾರವಿದ್ದಂತೆ ಎಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶಿವಾನಂದ ಕೆಳಗಿನಮನಿ

ಮಾತನಾಡಿದರು ಅವರು ರವಿವಾರದಂದು ರಂಗಮಂದಿರದಲ್ಲಿ ನಡೆದ ಕಲಾ ಸಂಕುಲ ಸಂಸ್ಥೆ ಮತ್ತು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಆಯೋಜನೆ ಮಾಡಿದ ಮೊದಲ ಬಾರಿಗೆ ನಡೆದ ಪುಸ್ತಕ ಸಂತೆ ಮತ್ತು ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿ ಅವರು ಮಾತನಾಡಿ ಪುಸ್ತಕ ಸಂತೆ ಒಂದು ವಿಶೇಷ ಕಾರ್ಯಕ್ರಮ ಇದು ಎಲ್ಲರೂ ಸದುಪಯೋಗ ಪಡೆದುಕೊಳ್ಳಬೇಕು ಇಂದಿನ ಯುವ ಪೀಳಿಗೆ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕಿದೆ, ಪುಸ್ತಕಗಳು ಓದುವುದರಿಂದ ಜ್ಞಾನ ಹೆಚ್ಚು ವೃದ್ಧಿಯಾಗುತ್ತದೆ. ದೇಶ ಸುತ್ತಬೇಕು, ಇಲ್ಲ ಕೋಶ ಓದಬೇಕೆನ್ನುವಂತೆ ಪುಸ್ತಕಗಳು ಪ್ರತಿಯೊಬ್ಬರ ಜೀವನದಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ ಒಂದು ಮನೆಯಲ್ಲಿ ನಮಗೆ ಏನೂ ಇರಲಿಲ್ಲ ಅಂದರೆ ಪರವಾಗಿಲ್ಲ ಆದರೆ ಪುಸ್ತಕಗಳು ಮತ್ತು ಪುಸ್ತಕ ಭಂಡಾರ ಇದ್ದೇ ಇರಬೇಕು ಮನುಷ್ಯನ ಜೀವನಕ್ಕೆ ಸ್ಪೂರ್ತಿ ಮತ್ತು ಚೈತನ್ಯವನ್ನು ಕೊಡುವಂತದ್ದು ಪುಸ್ತಕಗಳು ಎಂದು ನುಡಿದರು.

ಪುಸ್ತಕ ಸಂತೆ ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ಸಾಹಿತಿಗಳಾದ



ವಿರಹನುಮಾನ ಅಯ್ಯಪ್ಪಯ್ಯ ಹುಡ ಚಿದಾನಂದ ಸಾಲಿ ಜಾನ್ ವೆಸ್ಲಿ.ಬಾಬು ಬಂಡಾರಿಗಲ್. ವೆಂಕಟೇಶ್ ಬೇವಿನ ಬೆಂಚಿ. ಸೈಯದ್ ವಲಿ ಉಪಸ್ಥಿತರಿದ್ದರು.

ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಲವ್ ಯು ಮುದ್ದು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಸ್ವೀಕರಿಸಿದ ಕನ್ನಡದ ಚಿತ್ರನಟ ಸಿದ್ದು ಮೂಲಿಮನಿ. ಸಮಾರಂಭದ ದಿವ್ಯ ಸಾನಿಧ್ಯವನ್ನು ಪೂಜ್ಯಶ್ರೀ ಜ್ಞಾನಾನಂದ ಮಹಾರಾಜ್ ಮಟಮಾರಿ ವಹಿಸಿದ್ದರು

ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಆಗಿರುವ ದುಬೈ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀದೇವಿ ಆರ್ ವಿ ನಾಯಕ ಅವರಿಗೆ ಅಭಿನಂದಿಸಲಾಯಿತು ಈ ಸಂದರ್ಭದಲ್ಲಿ ಅವರು ಮಾತನಾಡಿ ಇದು ನಮ್ಮ ಜಿಲ್ಲೆಗೆ ತಂದ ಒಂದು ಹೆಮ್ಮೆಯ ವಿಷಯ ದುಬೈ ಕನ್ನಡಿಗರಿಗೆ ನಾನು ತುಂಬು ಹೃದಯದಿಂದ ಕೃತಜ್ಞತೆ ಸಲ್ಲಿಸುತ್ತೇನೆ ರಾಜಕೀಯವಾಗಿ ಸಾಮಾಜಿಕವಾಗಿ ಇನ್ನು ನನಗೆ ಇದರಿಂದ ಬಲಬಂದಂತಾಗಿದೆ ಎಂದು ಅವರು ಮಾತನಾಡಿದರು.

ತುಂಗಭದ್ರಾ ನಿರ್ಮಲ ಅಭಿಯಾನವನ್ನು ಕೈಗೆತ್ತಿಕೊಂಡು ಸಮಾಜಮುಖಿ ಕೆಲಸ ಮಾಡುತ್ತಿರುವ ಪರಿಸರವಾದಿ ಸಿರವಾರದ ಎನ್ ಉದಯಕುಮಾರ್ ಅವರಿಗೂ ಅಭಿನಂದಿಸಲಾಯಿತು. ವೇದಿಕೆ ಮೇಲೆ ಚಿತ್ರನಟಿ ರವೀಕ್ಷಾ ಶೆಟ್ಟಿ, ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷರಾದ ರೇಖಾ ಬಡಿಗೇ.ಜಿಲ್ಲಾ ಕಾರಾಗೃಹ ಆದೀಕ್ಷಕರಾದ ಶ್ರೀಮತಿ ಅನಿತಾ ಹಿರೇಮನಿ. ಮಾಜಿ ನಗರ ಸಭಾ ಸದಸ್ಯರಾದ ನರಸಪ್ಪ ಯಕ್ಲಾಸಪುರ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟಿನ ಪ್ರಧಾನ ಕಾರ್ಯದರ್ಶಿ, ಡಿ ಶ್ರೀನಿವಾಸ್. ಪತ್ರಕರ್ತಆಲಂ ಗಣಿ ಗಬ್ಬುರು ಅತಿಥಿಗಳಾಗಿ ಆಗಮಿಸಿದರು.



ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಯು ಆಂಜನೇಯ. ಸರಸ್ವತಿ. ವಿಜಯಲಕ್ಷ್ಮಿ ಹಿರೇಮಠ. ನರಸಿಂಹಲು ಮರ್ಚೆಡ್. ಮಲ್ಲಿಕಾರ್ಜುನ ಗುಲ್ಬರ್ಗ ಗೌಡ್ರು, ನೂರು ಮಹಮ್ಮದ್. ಬಸನಗೌಡ ಮಡಿವಾಳಯ್ಯ ಹಿರೇಮಠ ಮಡಿವಾಳಯ್ಯ ಗಡಗಿ ಸಾಧಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಮತ್ತು ಸ್ವಾಗತವನ್ನು ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ್ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಐದು ಕಲಾತಂಡಗಳು ಭಾಗವಹಿಸಿದ್ದರು ನೀರಮಾನ್ವಿ ತಂಡ ಡೊಳ್ಳು ಕುಣಿತ.ಬಳ್ಳಾರಿಯ ಪುಟ್ಟರಾಜ ತಂಡದಿಂದ ಜಾನಪದ ಗೀತೆ. ಅಂತರಾಷ್ಟ್ರೀಯ ಕಲಾವಿದ ನಾರಾಯಣಪ್ಪ ಗದಗ ಇವರಿಂದ ವೈಲಿನ್ ವಾದ್ಯಗೋಷ್ಠಿ. ಮಹಾಲಕ್ಷ್ಮಿ ತಂಡದಿಂದ ಸುಗಮ ಸಂಗೀತ. ಕೊಪ್ಪಳದ ಲಿಂಗದಳ್ಳಿ ಸರಕಾರಿ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ ಸ್ಥಳೀಯ ಗಾಯಕರಾದ ಅಮರಗೌಡ.ತನುಜಾ ಸುಧಾ. ಸಂತೋಷಿ. ಸೈಯದ್ ವಲಿ ಉತ್ತಮ ಗಾಯನವನ್ನು ಪ್ರದರ್ಶಿಸಿದರು. ಕಾರ್ಯಕ್ರಮ ಮೌನೇಶ್ ವಡವಾಟಿ. ಸುರೇಶ್ ಸಗಮಕುಂಟ ಭಾಗವಹಿಸಿದ್ದರು.ತುಂಬಾ ಅಚ್ಚುಕಟ್ಟಾಗಿ ಪುಸ್ತಕ ಸಂತೆ ಮತ್ತು ಸಂಕ್ರಾಂತಿ ಸಂಭ್ರಮ ಜನಮನ ಗೆದ್ದಿತು...

ಪುಸ್ತಕ ಸಂತೆ ಸಂಕ್ರಾಂತಿ ಸಂಭ್ರಮ : ಪುಸ್ತಕಗಳು ಸಮಾಜದ ಜ್ಞಾನ ವಾಹಿನಿಯಂತೆ ಅವು ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಪ್ರವಹಿಸುವ ಸುಲಭವಾದ ಸಾಧನೆಗಳು ಪುಸ್ತಕಗಳು ಜ್ಞಾನದ ಭಂಡಾರವಿದ್ದಂತೆ ಎಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶಿವಾನಂದ ಕೆಳಗಿನಮನಿ ಮಾತನಾಡಿದರು ಅವರು ರವಿವಾರದಂದು ರಂಗಮಂದಿರದಲ್ಲಿ ನಡೆದ ಕಲಾ ಸಂಕುಲ ಸಂಸ್ಥೆ ಮತ್ತು ಶ್ರೀ ಲಕ್ಷ್ಮೀನರಸಿಂಹ

3ನೇ ಪುಟಕ್ಕೆ

ಮಕ್ಕಳಲ್ಲಿ ಸ್ವತಂತ್ರ ಆಲೋಚನಾ ಸಾಮರ್ಥ್ಯ ಬೆಳವಣಿಗೆ ಅಗತ್ಯ: ಎಸ್.ಪಿ. ಸಿದ್ದಾರ್ಥ ಫೊಯಲ್



ಬಾಗಲಕೋಟೆ,ಜ.19-

ಭವ್ಯ ಭಾರತದ ನಿರ್ಮಾಣಕ್ಕೆ ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ನಿರ್ಮಿಸುವ ಕರ್ತವ್ಯ ಶಾಲೆಯಗಳ ಮೇಲಿದೆ, ಮಕ್ಕಳು ಸ್ವತಂತ್ರವಾಗಿ ಆಲೋಚನೆ ಮಾಡುವ ಸಾಮರ್ಥಗಳಿಸಬೇಕು ಎಂದು ಬಾಗಲಕೋಟೆ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಸಿದ್ದಾರ್ಥ ಫೊಯಲ್ ಹೇಳಿದರು.

ಅವರು ವಿದ್ಯಾಗಿರಿಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನ ನೂತನ ಸಭಾಭವನದಲ್ಲಿ ಬಸವೇಶ್ವರ ಸಿಬಿಎಸ್.ಇ ಶಾಲೆಯ ಎರಡು ದಿನಗಳ ವಾರ್ಷಿಕೋತ್ಸವ ಸ್ಪಾಟ್ ಲೈಟ್ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಭವಿಷ್ಯದ ಭವ್ಯ ಭಾರತದ ನಿರ್ಮಾಣಕ್ಕೆ ಮಕ್ಕಳನ್ನು ತಯಾರಿಸುವುದು ಪ್ರತಿಯೊಂದು ಶಾಲೆಯ ಆದ್ಯ ಕರ್ತವ್ಯವಾಗಿದೆ. ಈ ಕಾರ್ಯ ಸಾಧನೆಯಲ್ಲಿ ಪಾಲಕರ ಸಹಕಾರ ಅತ್ಯಗತ್ಯ. ಮಕ್ಕಳಲ್ಲಿ ಸ್ವತಂತ್ರವಾಗಿ ಆಲೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಬೇಕು ಇದಕ್ಕಾಗಿ ಪಾಲಕರು ಶಾಲೆಯೊಂದಿಗೆ ಕೈಜೋಡಿಸಿದಾಗ ಮಾತ್ರ ಮಕ್ಕಳ ಸರ್ವಾಂಗೀಣ ಪ್ರಗತಿಯಾಗಲು ಸಾಧ್ಯ. ಅಭೂತಪೂರ್ವವಾದ ಇಂದಿನ ವಾರ್ಷಿಕೋತ್ಸವದ ವೈಭವ ಹಾಗೂ ಬಿಪ್ಸ್ ಶಾಲೆಯ ಕಾರ್ಯ ವೈಖರಿ ವೈಯಕ್ತಿಕವಾಗಿ ನನಗೆ ತುಂಬಾ ಖುಷಿ ತಂದಿದೆ. ಎಂದು ತಿಳಿಸಿದರು.

ಬಾಗಲಕೋಟೆ ಯುಕೆಪಿ ಉಪಮುಖ್ಯಾಧಿಕಾರಿಯಾದ ಮಹಾದೇವ ಮುರಗಿ ಅವರು ಮಾತನಾಡಿ ಮಕ್ಕಳು ಕಲಿಕೆಯ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವಾರ್ಷಿಕೋತ್ಸವ ಅತ್ಯುತ್ತಮ ವೇದಿಕೆಯಾಗಿದೆ. ಬಿಪ್ಸ್ ಶಾಲೆಯ ಭವ್ಯ ವಾರ್ಷಿಕೋತ್ಸವದ ಅಚ್ಚುಕಟ್ಟುತನ ನನಗೆ ನಿಜಕ್ಕೂ ಸಂತೋಷವನ್ನುಂಟು ಮಾಡಿದೆ. ಇದರ ಯಶಸ್ಸಿನಲ್ಲಿ ಸಕ್ರೀಯವಾಗಿ ಶ್ರಮಿಸಿದ ಪ್ರತಿಯೊಬ್ಬರಿಗೂ ಅಭಿನಂದನೆಗಳು.ಇದರಲ್ಲಿ ಪಾಲ್ಗೊಂಡಿದ್ದು ನನ್ನ ಜೀವನದ ಅವಿಸ್ಮರಣೀಯ ಕ್ಷಣಗಳಲ್ಲಿ ಒಂದಾಗಿ ಉಳಿಯಲಿದೆ. ಎಂದು ತಿಳಿಸಿದರು.

ಬಿ.ವಿ.ವಿ. ಸಂಘದ ಗೌರವ ಕಾರ್ಯದರ್ಶಿಗಳಾದ ಮಹೇಶ ಅಥಣಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ವೇದಿಕೆಯಲ್ಲಿ ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಮಹಾಂತೇಶ ಶೆಟ್ಟರ್ ಶಾಲೆಯ ಪ್ರಗತಿಯ ಬಗ್ಗೆ ಮಾತನಾಡಿದರು. ಶಾಲೆಯ ಪ್ರಾಂಶುಪಾಲರಾದ ಸಿ.ಬಿ ಸುರೇಶ್ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿ ಸಭಿಕರನ್ನು ಸ್ವಾಗತಿದರು. ಉಪಪ್ರಾಂಶುಪಾಲರಾದ ಶ್ರೀಮತಿ ಮಂಗಳಗೌರಿ ಹೆಗ್ಡೆ ಶಾಲೆಯ ಮಕ್ಕಳ ಪ್ರಗತಿಯ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಕಳೆದ ವರ್ಷದ ಸಿಬಿಎಸ್ಸಿಇ 10ನೇ ವರ್ಗದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಗೈದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.


ಎರಡು ದಿನಗಳ ಕಾಲ ನಡೆದ ಈ ಅದ್ದೂರಿ ಸಮಾರಂಭದ ಮೊದಲ ದಿನ ನಡೆದ ವೈವಿಧ್ಯಮಯ ವಾದ ಸಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಶಿವನ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನದ ನೃತ್ಯ, ಬಸವಣ್ಣನವರ ಮಹಾಮನೆಯ ನಾಟಕ, ಶಿವಾಜಿ ಮಹಾರಾಜರ ನೃತ್ಯ ರೂಪಕ, ಮಹಾಭಾರತ ಆಧಾರಿತ ಮೈಮ್ ಶೋ, ದಸರಾ ದರ್ಬಾರ್ ವೈಭವದ ನೃತ್ಯ ರೂಪಕ ಶ್ರೀಕೃಷ್ಣ ಪರಮಾತ್ಮನ ಲೀಲೆ ಹಾಗೂ ಭಗವದ್ಗೀತೆ ಆಧಾರಿತ ನೃತ್ಯ ರೂಪಕ, ಇಂಗ್ಲಿಷ್, ಕನ್ನಡ ಹಾಗೂ ಹಿಂದಿ ಭಾಷೆಯ ನಾಟಕ ಇವೇ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದ ಸಾವಿರಾರು ಮಂದಿ ಪ್ರೇಕ್ಷಕರ ಮನಸೂರೆಗೊಂಡವು.

ಚಾಲುಕ್ಯ ಉತ್ಸವಕ್ಕೆ ಸಕಲ ಸಜ್ಜು : ಸಿದ್ದತೆ ವೀಕ್ಷಿಸಿದ ಸಚಿವ ತಿಮ್ಮಾಪೂರ

ಇಂದಿನಿಂದ 3 ದಿನಗಳ ಕಾಲ ಚಾಲುಕ್ಯರ ಗತವೈಭವ ಸಂಭ್ರಮ

ಬಾಗಲಕೋಟೆ,ಜ.19-

ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿರುವ ಚಾಲುಕ್ಯರ ಉತ್ಸವ ಸಂಭ್ರಮಕ್ಕೆ ಎಲ್ಲ ರೀತಿಯಿಂದ ಸಜ್ಜುಗೊಳಿಸಲಾಗಿದೆ ಎಂದು ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.



ಬಾದಾಮಿಯ ನಗರದ ಎಪಿಎಂಸಿ ಆವರಣದಲ್ಲಿ ನಿರ್ಮಿಸಲಾದ ಇಮ್ಮಡಿ ಪುಲಕೇಶಿ ಬೃಹತ್ ವೇದಿಕೆಯ ಸ್ಥಳಕ್ಕೆ ಭೇಟಿ ನೀಡಿ ಸಿದ್ದತೆಗಳನ್ನು ವೀಕ್ಷಣೆ ಮಾಡಿದರು. ಸಾರ್ವಜನಿಕರ ವೀಕ್ಷಣೆ ಆಸನಗಳ ವ್ಯವಸ್ಥೆ, ಗಣ್ಯವ್ಯಕ್ತಿಗಳಿಗೆ ಆಸನಗಳ ವ್ಯವಸ್ಥೆ ಸೇರಿದಂತೆ ಪೊಲೀಸ್ ಬಂದೋಬಸ್ತ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಿದರು. ವೇದಿಕೆ ಪಕ್ಕದಲ್ಲಿ ಅತಿಥಿ ಗಣ್ಯರ ವಿಶ್ರಾಂತಿ ಸ್ಥಳ ಹಾಗೂ ಕಲಾವಿದರಿಗೆ ಸ್ಥಳದ ವೀಕ್ಷಣೆ ಮಾಡಿದರು.

ನಂತರ ಮಾತನಾಡಿದ ಸಚಿವರು ಜನವರಿ 19 ರಂದು ಸಂಜೆ 6.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲುಕ್ಯ ಉತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಜಿಲ್ಲೆ ಮತ್ತು ಸುತ್ತಲಿನ ಜನವರಿಗೆ ಗರಿಷ್ಠ ಮನರಂಜನೆ ಒದಗಿಸುವ ನಿಟ್ಟಿನಲ್ಲಿ ಎಲ್ಲ ಸಿದ್ದತೆಗಳನ್ನು ಮಾಡಲಾಗಿದೆ. ಜಿಲ್ಲೆಯ ಎಲ್ಲ ತಾಲೂಕುಗಳಿಂದ ಉತ್ಸವ ವೀಕ್ಷಣೆಗೆ ವಿಶೇಷ ಬಸ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸಿದ್ದತೆ ಪರಿಶೀಲನಾ ವೇಳೆ ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ, ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಪ್ರದರ್ಶನ ಮಳಿಗೆ

ಚಾಲುಕ್ಯ ಉತ್ಸವ ಹಿನ್ನಲೆಯಲ್ಲಿ ಉತ್ಸವದ ವೇದಿಕೆಯ ಮುಂಭಾಗದಲ್ಲಿ ಒಟ್ಟು 40 ವಸ್ತು ಪ್ರದರ್ಶನ ಮಳಿಗೆಗಳನ್ನು ಹಾಕಲಾಗಿದೆ. ಇದರಲ್ಲಿ ಬಾಗಲಕೋಟೆ ಜಿಲ್ಲೆಯದು 33 ಹಾಗೂ ಬೆಂಗಳೂರು, ಮೈಸೂರು, ಹಾವೇರಿ, ಬಳ್ಳಾರಿ ಜಿಲ್ಲೆ ಸೇರಿ 7 ಮಳಿಗೆಗಳು ಇವೆ. ಮುಖ್ಯವಾಗಿ ವಿಶೇಷ ಆಹಾರ ಆಧಾರಿತ, ಜವಳಿ ಮತ್ತು ಇತರೆ ಮಹಿಳೆಗಳು ಇದರ ಜೊತೆಗೆ ವಿವಿಧ ಇಲಾಖೆಗಳ ಪ್ರದರ್ಶನ ಮಳಿಗೆಗಳನ್ನು ಹಾಕಲಾಗಿದೆ ಎಂದು ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಪ್ರಶಾಂತ ಬಾರಿಗಿಡದ ಹೇಳಿದರು.

ಉತ್ಸವದಲ್ಲಿ ಬೈ ಸ್ಕೈ ಸೌಲಭ್ಯ

ಈ ಬಾರಿ ಚಾಲುಕ್ಯ ಉತ್ಸವದಲ್ಲಿ ಚಾಲುಕ್ಯರ ಪ್ರಮುಖ ಸ್ಥಳಗಳಲ್ಲಿ ಹೆಲಿಕ್ಯಾಪ್ಟರ ಮೂಲಕ ವೀಕ್ಷಿಸು ಅನುವು ಮಾಡಿಕೊಡಲಾಗಿದ್ದು, ಪ್ರವಾಸಿಗರು ಹಾಗೂ ಸಾರ್ವಜನಿಕರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಉತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಇದೂ ಕೂಡಾ ಒಂದಾಗಿದೆ. ಈ ಅವಕಾಶ ಜನವರಿ 20 ವರೆಗೆ ಇದ್ದು, ಬಾದಾಮಿ ನಗರದ ವೀರಪುಲಕೇಶಿ ಕಾಲೇಜಿನ ಆಟದ ಮೈದಾನದಲ್ಲಿ ಹೆಲಿಪ್ಯಾಟ್ ನಿರ್ಮಿಸಲಾಗಿದೆ. ಒಂದು ಟ್ರಿಪ್‌ಗೆ ಹೋಗಿ ಬರುವವರಿಗೆ ತಲಾ 3950 ರೂ.ಗಳ ಟಿಕೇಟ ದರವನ್ನು ನಿಗದಿಪಡಿಸಲಾಗಿದೆ. 6 ರಿಂದ 7 ನಿಮಿಷದ ವರೆಗೆ ಆಗಸದಲ್ಲಿ ಸುತ್ತಾಡಬಹುದಾಗಿದೆ. ಮೊದಲ ದಿನ ರವಿವಾರದಂದು ಒಂದು ಟ್ರಿಪ್‌ಗೆ 6 ಜನರಂತೆ 22 ಟ್ರಿಪ್‌ಗಳಾಗಿವೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಸಕ ಗೋಪಾಲ ಹಿತ್ತಲಮನಿ ತಿಳಿಸಿದರು.

ಇ-ಆಫೀಸ್ ಬಳಕೆಯಲ್ಲಿ ರಾಜ್ಯದಲ್ಲಿಯೇ ಕಲಬುರಗಿ ನಂಬರ್-1 -ಪ್ರಿಯಾಂಕ್ ಖರ್ಗೆ

ಕಲಬುರಗಿ,ಜ.19-

ಸರ್ಕಾರಿ ಕಚೇರಿಯಲ್ಲಿ ಕಡತಗಳ ತ್ವರಿತ ವಿಲೇವಾರಿಗೆ ತಂತ್ರಜ್ಞಾನದ ಸಮರ್ಪಕ ಬಳಕೆಗೆ ಒತ್ತು ನೀಡಿದ ಪರಿಣಾಮ ಇ-ಆಫೀಸ್ ಬಳಕೆಯಲ್ಲಿ ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಕಲಬುರಗಿ ಜಿಲ್ಲಾ ಪಂಚಾಯತ ಇಡೀ ರಾಜ್ಯದಲ್ಲಿಯೇ ನಂಬರ್-1 ಸ್ಥಾನ ಪಡೆದುಕೊಂಡಿದೆ ಎಂದು ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ.-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಕಳೆದ 2025ನೇ ಕ್ಯಾಲೆಂಡರ್ ವರ್ಷದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 2,938 ಇ-ಕಡತ ಸೃಷ್ಟಿಸಿ 54,381 ಕಡತ ವಿಲೇವಾರಿ ಮಾಡಲಾಗಿದೆ. ಅದೇ ರೀತಿ ಸಾರ್ವಜನಿಕ ರಿಂದ ಸ್ವೀಕೃತ 13,664 ಪತ್ರಗಳನ್ನು ಇ-ರಸೀದಿಯಡಿ ಸೃಷ್ಟಿಸಿ 3,52,221 ಇ-ರಸೀದಿ ವಿಲೇವಾರಿ ಮಾಡಲಾಗಿದೆ.

ಸರ್ಕಾರಿ ಕಚೇರಿಗಳು ಜನಸ್ನೇಹಿಯಾಗಬೇಕು. ಸಾರ್ವಜನಿಕರು ತಮ್ಮ ಕೆಲಸಕ್ಕೆ ಸರ್ಕಾರಿ ಕಚೇರಿಗಳಿಗೆ ಅನಗತ್ಯ ವರ್ಷಗಟ್ಟಲೆ ಅಲೆದಾಡುವುದನ್ನು ತಪ್ಪಿಸಲೆಂದೆ ಇ-ಆಫೀಸ್ ಅನುಷ್ಠಾನದ ಮೂಲಕ ಪ್ರತಿ ಅಧಿಕಾರಿ-ಸಿಬ್ಬಂದಿಗೆ ಕಾಲಮಿತಿಲ್ಲಿಯೆ ಕಡತ ವಿಲೇವಾರಿಗೆ ಹೊಣೆಗಾರಿಕೆ ನೀಡಿದ ಫಲ ಇದಾಗಿದೆ. ಆಡಳಿತ ಸುಧಾರಣೆಯಲ್ಲಿ ಕಲಬುರಗಿ ಜಿಲ್ಲೆ ಮುಂಚೂಣಿಯಲ್ಲಿರುವುದಕ್ಕೆ ಸಚಿವರು ಸಂತಸ ವ್ಯಕ್ತಪಡಿಸಿದ್ದಾರೆ.

ಟಾಪ್ 10 ನಲ್ಲಿ ಕಲ್ಯಾಣದ ನಾಲ್ಕು ಜಿಲ್ಲೆ: ರಾಜ್ಯದಾದ್ಯಂತ 2025 ಕ್ಯಾಲೆಂಡರ್ ವರ್ಷದಲ್ಲಿ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಇ-ಕಡತ ಬಳಕೆಯಲ್ಲಿ ಟಾಪ್-10 ಜಿಲ್ಲೆಗಳ ಅಂಕಿ-ಸಂಖ್ಯೆ ಅವಲೋಕಿಸಿದರೆ

2,938 ಇ-ಕಡತ ಸೃಜಿಸಿ ಕಲಬುರಗಿ ಜಿಲ್ಲಾ ಪಂಚಾಯತ್ ಮೊದಲನೇ ಸ್ಥಾನದಲ್ಲಿದ್ದರೆ, 2,523 ಕಡತ ಸೃಜಿಸಿ ಚಿತ್ರದುರ್ಗ ಜಿ.ಪಂ. ಎರಡನೇ ಹಾಗೂ 2,476 ಕಡತದೊಂದಿಗೆ ಬೆಂಗಳೂರು ನಗರ ಜಿ.ಪಂ. ಜಿಲ್ಲೆ ಮೂರನೇ ಸ್ಥಾನ ಪಡೆದಿದೆ. 2,339 ಇ-ಕಡತ ಸೃಜಿಸಿ ಐದನೇ ಸ್ಥಾನದಲ್ಲಿ ಬೀದರ, 1,955 ಇ-ಕಡತ ಸೃಜಿಸಿ ಎಂಟನೇ ಸ್ಥಾನದಲ್ಲಿ ಯಾದಗಿರಿ, 1,924 ಇ-ಕಡತ ಸೃಜನೆಯೊಂದಿಗೆ ಒಂಬತ್ತನೇ ಸ್ಥಾನದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತ್ ಸ್ಥಾನ ಪಡೆದುಕೊಂಡಿದೆ. ಅಗ್ರ 10ರಲ್ಲಿ ಕಲ್ಯಾಣ ಕರ್ನಾಟಕ 4 ಜಿಲ್ಲೆಗಳು ಇ-ಆಫೀಸ್ ಅನುಷ್ಠಾನದಲ್ಲಿ ಸ್ಥಾನ ಪಡೆದಿರುವುದು ಪ್ರದೇಶದ ಗ್ರಾಮೀಣ ಭಾಗದಲ್ಲಿ ಆಡಳಿತ ವೇಗ ಪಡೆದುಕೊಂಡಿರುವುದಕ್ಕೆ ಹಿಡಿದ ಕನ್ನಡಿಯಾಗಿದೆ. ಸುಗಮ ಆಡಳಿತಕ್ಕೆ ಕಲಬುರಗಿ ಜಿಲ್ಲೆ ಮಾದರಿಯಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಗಮನ ಸೆಳೆದ ಆಳಂದ-ಅಫಜಲಪೂರ ತಾಲೂಕಾ ಪಂಚಾಯತಿ: ಇನ್ನು ತಾಲೂಕಾ ಪಂಚಾಯತಿವಾರು ಇ.ಆಫೀಸ್ ಬಳಕೆಯಲ್ಲಿಯೂ ಕಳೆದ ವರ್ಷದಲ್ಲಿ ಜಿಲ್ಲೆ ಗಮನಾರ್ಹ ಸಾಧನೆ ಮಾಡಿದೆ. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕು ಪಂಚಾಯತಿ 1,508 ಇ-ಕಡತ ಸೃಜಿಸಿ 3,089 ಇ-ಕಡತ ವಿಲೇವಾರಿ ಮಾಡಿ ಅಗ್ರ ಸ್ಥಾನ ಪಡೆದುಕೊಂಡರೆ, ಜಿಲ್ಲೆಯ ಆಳಂದ ತಾಲೂಕು ಪಂಚಾಯತಿ 1,127 ಇ-ಕಡತ ಸೃಜಿಸಿ 3,560 ಕಡತ ವಿಲೇವಾರಿ ಮತ್ತು 526 ಇ-ರಸೀದಿ ಸೃಷ್ಟಿಸಿ 2,022 ಇ-ರಸೀದಿ ವಿಲೇವಾರಿಯೊಂದಿಗೆ ರಾಜ್ಯದಲ್ಲಿಯೇ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಅದೇ ರೀತಿ ಅಫಜಲಪುರ ತಾಲೂಕ ಪಂಚಾಯತಿ 668 ಇ-ಕಡತ ಸೃಜಿಸಿ 3,189 ಕಡತ ವಿಲೇವಾರಿ ಮಾಡಿ ಏಳನೇ ಸ್ಥಾನ ಹಾಗೂ ಕಲಬುರಗಿ ತಾಲೂಕ ಪಂಚಾಯತಿ 564 ಇ-ಕಡತ ಸೃಜಿಸಿ 1,527 ಕಡತ ವಿಲೇವಾರಿ ಮಾಡಿ ಒಂಭತ್ತನೇ ಸ್ಥಾನ ಕಾಯ್ದುಕೊಂಡಿದೆ. ಈ ಮೂಲಕ ತಾಲೂಕಾವಾರು ಟಾಪ್ ಟೆನ್ ನಲ್ಲಿ ಕಲಬುರಗಿ ಜಿಲ್ಲೆಯ ಮೂರು ತಾಲೂಕುಗಳು ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿವೆ.

ಸಾರ್ವಜನಿಕರ ಅರ್ಜಿ ವಿಲೇವಾರಿ ಪ್ರಥಮಾದ್ಯತೆ: ಜಿಲ್ಲೆಯ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತಿಗಳು ಇ-ಕಡತ ಬಳಕೆಯಲ್ಲಿನ ಸಾಧನೆಗೆ ಸಂತಸ ವ್ಯಕ್ತಪಡಿಸಿರುವ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಸಾರ್ವಜನಿಕರು ಕಚೇರಿಗೆ ಸಲ್ಲಿಸುವ ಅರ್ಜಿಗಳನ್ನು ಇ-ಆಫೀಸ್ ಸಹಾಯದಿಂದ ಪ್ರಥಮಾದ್ಯತೆ ಮೇಲೆ ಕಡತ ವಿಲೇವಾರಿ ಮಾಡಿ ಪತ್ರಗಳಿಗೆ ಭೌತಿಕ ಸಹಿ ಬದಲಾಗಿ ಡಿಜಿಟಲ್ ಸಹಿವುಳ್ಳ ಒತ್ರದಮುಲಕವೆ ವ್ಯವಹರಿಸಲಾಗುತ್ತಿದೆ. ಇದಕ್ಕೆ ಕಾರಣರಾದ ಸಿಬ್ಬಂದಿಗಳನ್ನು ಶ್ಲಾಘಿಸಿದ ಅವರು ಮುಂದೆಯೂ ಇದೇ ರೀತಿಯಲ್ಲಿ ತ್ವರಿತ ಕಡತ ವಿಲೇವಾರಿ ಮೂಲಕ ಸಾರ್ವಜನಿರ ಕೆಲಸ ಕಾರ್ಯಗಳಿಗೆ ಸ್ಪಂದಿಸುವಂತೆ ಕೆಳ ಹಂತದ ಸಿಬ್ಬಂದಿಗಳಿಗೆ ಸೂಚಿಸಿದ್ದಾರೆ.



ಜೀವ ಅಮೂಲ್ಯವಾದುದು, ರಸ್ತೆ ನಿಯಮಗಳನ್ನು ಪಾಲಿಸಿ ಸುರಕ್ಷಿತವಾಗಿರಿ


ವಿಜಯನಗರ,ಜ.19-

ಜೀವ ಅಮೂಲ್ಯವಾದುದು, ರಸ್ತೆ ನಿಯಮಗಳನ್ನು ಪಾಲಿಸಿ ಸುರಕ್ಷಿತವಾಗಿರಿ ಎಂದು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ.ಪಿ. ಕುಮಾರಸ್ವಾಮಿ ಹೇಳಿದರು.

ನಗರದ ವಡಕಾರಾಯ ದೇವಸ್ಥಾನ ಹತ್ತಿರ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯ ಜಂಟಿ ಸಹಯೋಗದಲ್ಲಿ 37ನೇ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಏರ್ಪಡಿಸಿದ್ದ ಬೈಕ್ ರ್ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ರಸ್ತೆ ಅಪಘಾತಗಳು ಸಂಭವಿಸಿದಾಗ ಕೇವಲ ವ್ಯಕ್ತಿಯಷ್ಟೇ ಅಲ್ಲ, ಇಡೀ ಕುಟುಂಬವೇ ಸಂಕಷ್ಟಕ್ಕೆ ಸಿಲುಕಿ ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ತಮಗಾಗಿ ಅಲ್ಲದ್ದಿದ್ದರೂ ತಮ್ಮ ಕುಟುಂಬಕ್ಕಾಗಿಯಾದರೂ ಹೆಲ್ಮೆಟ್ ಧರಿಸಬೇಕು. ಸವಾರರು ಕೇವಲ ದಂಡಕ್ಕೆ ಹೆದರಿ ಸಂಚಾರಿ ನಿಯಮ ಪಾಲಿಸುವುದಕ್ಕಿಂತ, ನಮ್ಮ ಜೀವದ ರಕ್ಷಣೆಗಾಗಿ, ಸ್ವಯಂಪ್ರೇರಿತರಾಗಿ ರಸ್ತೆ ಸಂಚಾರಿ ನಿಯಮ ಪಾಲಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಎಸ್ಪಿ ಮಂಜುನಾಥ, , ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಪ್ರಶಾಂತ್ ನಾಗಲಾಪುರ ಸೇರಿ ಮತ್ತಿತರರು ಇದ್ದರು.



ಕೆ.ಪಿ.ಆರ್.ಶುಗರ್ಸ್ ಕಾರ್ಖಾನೆಗೆ ಡಿ.ಸಿ. ದಿಢೀರ ಭೇಟಿ

ಕಲಬುರಗಿ, ಜ.19-

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಶನಿವಾರ ಅಫಜಲಪೂರ ತಾಲೂಕಿನ ಚಿಣಮಗೇರಾ ಗ್ರಾಮದಲ್ಲಿರುವ ಕೆ.ಪಿ.ಆರ್.ಶುಗರ್ಸ್ ಕಾರ್ಖಾನೆಗೆ ದಿಢೀರ ಭೇಟಿ ನೀಡಿ ಕಬ್ಬು ತೂಕ ಕಾರ್ಯ ಪರಿಶೀಲಿಸಿದರು.

ಕಬ್ಬು ತೂಕ ಮಾಡುವ ಯಂತ್ರ ಕಾರ್ಯ ವಿಕ್ಷಿಸಿದಲ್ಲದೆ ಕಾರ್ಖಾನೆಯ ವಿವಿಧ ವಿಭಾಗಕ್ಕೆ ಭೇಟಿ ನೀಡಿದ ಅವರು ಕಬ್ಬು ಇಳುವರಿ ಕುರಿತು ಕಾರ್ಖಾನೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕಬ್ಬು ಮಾರಾಟ ಮಾಡಲು ಬರುವ ರೈತರಿಗೆ ಕುಡಿಯುವ ನೀರು,

ಶೌಚಾಲಯ, ರಾತ್ರಿ ಇರಲು ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕೆಂದು ಸೂಚಿಸಿದರು.

ಇನ್ನು ಸಕಾಲದಲ್ಲಿಯೆ ರೈತರಿಗೆ ಕಬ್ಬಿನ ಹಣ ಪಾವತಿ ಮಾಡಬೇಕು. ಅನಗತ್ಯ ವಿಳಂಬ ಮಾಡಬಾರದು. ಹಣ ಪಾವತಿಯ ಪ್ರತಿ ವ್ಯವಹಾರವು ಪಾರದರ್ಶಕವಾಗಿರಬೇಕು ಮತ್ತು ಪ್ರತಿ ಹಂತದ ಮಾಹಿತಿ ರೈತರಿಗೆ ಒದಗಿಸಬೇಕು. ರೈತರ ಸಮಕ್ಷಮ ತೂಕ ಮಾಡಬೇಕು ಎಂಬಿತ್ಯಾದಿ

ಕಾರ್ಖಾನೆ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದರು. ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ರೈತರೊಂದಿಗೆ ಸಂವಾದಿಸಿ ಅವರ ಸಮಸ್ಯೆ ಆಲಿಸಿದರು.

ತಹಶೀಲ್ದಾರರ ಸಂಜೀವಕುಮಾರ ದಾಸರ್ ಸೇರಿದಂತೆ ಕಾರ್ಖಾನೆಯ ಉಪಾಧ್ಯಕ್ಷರು, ಇತರೆ ಅಧಿಕಾರಿಗಳು, ರೈತ ಮುಖಂಡರು ಇದ್ದರು.

ಸೌದಿ ಅರೇಬಿಯಾ ಬಸ್ ಅಪಘಾತ: ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಹಸ್ತಾಂತರಿಸಿದ ಸಚಿವ ರಹೀಂ ಖಾನ್

ಬೀದರ, ಜ.19-

ಕಳೆದ ವರ್ಷ ಸೌದಿ ಅರೇಬಿಯಾದಲ್ಲಿ ನಡೆದ ಬಸ್ ಅಪಘಾತದಲ್ಲಿ ದುರಂತವಾಗಿ ಸಾವನ್ನಪ್ಪಿದ ದಿವಂಗತ ರಹಮತ್ ಬೀ ಅವರ ಕುಟುಂಬಕ್ಕೆ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು 5 ಲಕ್ಷ ರೂ. ಪರಿಹಾರದ ಚೆಕ್‌ನ್ನು ಹಸ್ತಾಂತರಿಸಿದರು.

ಅವರು ರವಿವಾರ ಬೀದರ್‌ನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ (ಕೆಎಸ್‌ಎಚ್‌ಸಿ) ಅಧ್ಯಕ್ಷ ಎಸ್. ಜುಲ್ಫಿಕರ್ ಅಹಮದ್ ಖಾನ್ ಮತ್ತು ಇತರ ಹಿರಿಯ ಜಿಲ್ಲಾ ಅಧಿಕಾರಿಗಳ ಸಮ್ಮುಖದಲ್ಲಿ ಚೆಕ್ ಹಸ್ತಾಂತರಿಸಿದರು.



ದುರಂತದ ಹಿನ್ನೆಲೆ: ಬೀದರ್‌ನ ಮೈಲೂರಿನ ನಿವಾಸಿ 80 ವರ್ಷದ ರಹಮತ್ ಬೀ, ನವೆಂಬರ್ 17, 2025 ರಂದು ಮೆಕ್ಕಾ ಮತ್ತು ಮದೀನಾ ನಡುವಿನ ಹೆದ್ದಾರಿಯಲ್ಲಿ ಡೀಸೆಲ್ ಟ್ಯಾಂಕರ್‌ಗೆ ಬಸ್ ಡಿಕ್ಕಿ ಹೊಡೆದು ಸಾವನ್ನಪ್ಪಿದ 45 ಭಾರತೀಯ ಯಾತ್ರಿಕರಲ್ಲಿ ಒಬ್ಬರು. ಈ ಅಪಘಾತವು ಭೀಕರ ಬೆಂಕಿಗೆ ಕಾರಣವಾಯಿತು, ಇದು ಸಮುದಾಯ ವನ್ನು ತೀವ್ರ ಶೋಕದಲ್ಲಿ ಮುಳುಗಿಸಿತು. ಸರ್ಕಾರದ ಬೆಂಬಲ ಮತ್ತು ಪರಿಹಾರ: ಘಟನೆಯ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರವು ಹತ್ತಿರದ ಸಂಬಂಧಿಕರಿಗೆ ರೂ. 5 ಲಕ್ಷ ಪರಿಹಾರವನ್ನು ಘೋಷಿಸಿತು. ಇಂದಿನ ಕಾರ್ಯಕ್ರಮವು ಈ ಬದ್ಧತೆಯ ಅಧಿಕೃತ ನೆರವೇರಿಕೆಯನ್ನು ಗುರುತಿಸಿತು.

ಪ್ರೀತಿಪಾತ್ರರ ನಷ್ಟಕ್ಕೆ ವಿಶೇಷವಾಗಿ ಪವಿತ್ರ ತೀರ್ಥ ಯಾತ್ರೆಯ ಸಮಯದಲ್ಲಿ ಯಾವುದೇ ರೀತಿಯ ಆರ್ಥಿಕ ನೆರವು ನಿಜವಾಗಿಯೂ ಸರಿದೂಗಿಸಲು ಸಾಧ್ಯವಿಲ್ಲ. ಆದಾಗ್ಯೂ, ಬಲಿಪಶುಗಳ ಕುಟುಂಬಗಳು ಈ ಕಷ್ಟಗಳನ್ನು ಮಾತ್ರ ಎದುರಿಸಲು ಬಿಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ನಮ್ಮ ಸರ್ಕಾರ ಬದ್ಧವಾಗಿದೆ. ರಹಮತ್ ಬೀ ಅವರ ಕುಟುಂಬದೊಂದಿಗೆ ನಾವು ಒಗ್ಗಟ್ಟಿನಲ್ಲಿ ನಿಲ್ಲುತ್ತೇವೆಂದು ಸಚಿವರು ತಿಳಿಸಿದರು.

ಕರ್ನಾಟಕ ರಾಜ್ಯ ಹಜ್ ಸಮಿತಿಯ (ಕೆಎಸ್‌ಎಚ್‌ಸಿ) ಅಧ್ಯಕ್ಷ ಎಸ್. ಜುಲ್ಫಿಕರ್ ಅಹಮದ್ ಖಾನ್ ಅವರು ಮಾತನಾಡಿ, ಕೆಎಸ್‌ಎಚ್‌ಸಿ ಜೆಡ್ಡಾದ ಭಾರತೀಯ ಕಾನ್ಸುಲೇಟ್ ಜನರಲ್ ಜೊತೆ ನಿರಂತರ ಸಮನ್ವಯದಲ್ಲಿದ್ದು, ಅಗತ್ಯವಿರುವ ಎಲ್ಲಾ ಔಪಚಾರಿಕತೆಗಳನ್ನು ಸುಗಮಗೊಳಿಸುತ್ತದೆ. ಸಮಿತಿಯು ಯಾತ್ರಿಕರ ಕಲ್ಯಾಣಕ್ಕೆ ಸಮರ್ಪಿತವಾ ಗಿದೆ ಮತ್ತು ಕುಟುಂಬಕ್ಕೆ ಆಡಳಿತಾತ್ಮಕ ಮಾರ್ಗದರ್ಶನವನ್ನು ನೀಡುವುದನ್ನು ಮುಂದುವರಿಸುತ್ತದೆಂದು ತಿಳಿಸಿದರು. ಈ ಸಂದಭ೯ದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಸೇರಿ ಇತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಸಿಎಂ ಸೇರಿದಂತೆ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ: ಡಿ.ಕೆ.ಶಿ

ಅದಕ್ಕಾಗಿಯೇ ಇರುವ ಕಾನೂನು ಚೌಕಟ್ಟಿನಲ್ಲಿ ಚುನಾವಣಾ ಆಯೋಗ ಕೆಲಸ ಮಾಡಲಿದೆ'' ಎಂದು ಪ್ರತಿಕ್ರಿಯಿಸಿದರು.

ಕೇಂದ್ರ ಚುನಾವಣಾ ಆಯೋಗದ ಮೇಲೆ ಅನುಮಾನದಿಂದ ಮತಪತ್ರ ಬಳಸಲಾಗುವುದೇ ಎಂದು ಕೇಳಿದಾಗ, ''ಚುನಾವಣೆ ಮಾಡಲು ನಾವ್ಯಾರು? ಚುನಾವಣೆ ನಡೆಸುತ್ತಿರುವುದು ಚುನಾವಣಾ ಆಯೋಗ. ರಾಜ್ಯ ಚುನಾವಣಾ ಆಯೋಗ ನಮ್ಮ ಸರ್ಕಾರದ ನಿಯಂತ್ರಣಕ್ಕೆ ಬರುವುದಿಲ್ಲ. ಅವರೇ ಏನು ಮಾಡಬೇಕು ಎಂದು ತೀರ್ಮಾನ ಮಾಡುತ್ತಾರೆ ಎಂದರು.

ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ: ರಾಯಚೂರು ತಂಡಕ್ಕೆ ದ್ವಿತೀಯ ಸ್ಥಾನ

ನಗದು ಬಹುಮಾನ ವಿತರಿಸಲಾ ಯಿತು. ರಾಯಚೂರು ತಂಡದ ಆಟಗಾರ ಭೀಮೇಶ್ ಪೂಜಾರ ಸೇರಿ ಮೂವರು ಪಂದ್ಯ ಪುರು ಷೋತ್ತಮ' ಪ್ರಶಸ್ತಿಗೆ ಭಾಜನರಾ ದರು. ಶ್ರೀಕಾಂತ್ ಸಾವೂರ್ ಅವರ ನಾಯಕತ್ವದಲ್ಲಿ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ತಂಡ ದ್ವಿತೀಯ ಸ್ಥಾನ ಪಡೆದು ಸಂಭ್ರಮಿಸಿತು.

ಪಂದ್ಯಾವಳಿಗೆ ಬೆಳಿಗ್ಗೆ ಸಹ್ಯಾದ್ರಿ ಕಾಲೇಜು ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಿವಮೊಗ್ಗ ಪ್ರೆಸ್ ಟ್ರಸ್ಟ್ ಅಧ್ಯಕ್ಷ ಎನ್. ಮಂಜುನಾಥ, ಶಿವಮೊಗ್ಗ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವೈದ್ಯನಾಥ್, ಶಿವಮೊಗ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಸ್. ಸುಂದರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ರಾಯಚೂರು ಕ್ರಿಕೆಟ್ ತಂಡಕ್ಕೆ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ್ ಜಾಗಟಗಲ್, ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಹೂಗಾರ, ಉಪಾಧ್ಯಕ್ಷ ಜಯರಾಮ ಎಂ., ಹಿರಿಯ ಪತ್ರಕರ್ತರಾದ ಕೆ. ಸತ್ಯನಾರಾಯಣ, ಚನ್ನಬಸವಣ್ಣ, ಚನ್ನಬಸವ ಬಾಗಲವಾಡ, ಖಾನ್ ಸಾಬ್ ಮೋಮಿನ್ ಸೇರಿದಂತೆ ಅನೇಕರು ಅಭಿನಂದನೆ ಸಲ್ಲಿಸಿದ್ದಾರೆ.

ವೇಮನರ ನಾಮಫಲಕಕ್ಕೆ ಮಾಲಾರ್ಪಣೆ

ಸದಸ್ಯರಾದ ಕೃಷ್ಣನಾಯಕ,ಸಂದೀಪ ಪಾಟೀಲ್,ಅಜೀತ್ ಕುಮಾರ ಹೊನ್ನಟಗಿ,ಮಲ್ಲಪ್ಪ, ಗ್ಯಾನಪ್ಪ ಸೇರಿದಂತೆ ಇನ್ನಿತರರು ಇದರು.

ಪತ್ರಕರ್ತ ಸೈಯದ್ ನಯೀಮ್ ಅಶ್ರಫ್ ಅವರಿಗೆ ಶ್ರದ್ಧಾಂಜಲಿ ಪತ್ರಕರ್ತರ ಅಕಾಲಿಕ ಸಾವುಗಳು ಆತಂಕಕಾರಿ: ಆರ್.ಗುರುನಾಥ

ನಿಭಾಯಿಸಬೇಕಿದ್ದ ಸಂದರ್ಭದಲ್ಲಿ ಅವರು ಅಗಲಿರುವುದು ಅತ್ಯಂತ ನೋವಿನ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು. ಪತ್ರಕರ್ತರ ಅಕಾಲಿಕ ಸಾವುಗಳ ಸುದ್ದಿ ಪದೇಪದೆ ಕೇಳಿಬರುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದರು. ಸಂಘದ ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ ಮಾತನಾಡಿ, ನಯೀಮ್ ಅಶ್ರಫ್ ಅವರು ಮೃದು ಸ್ವಭಾವದವರಾಗಿದ್ದು, ಮಾತಿಗಿಂತ ಕೆಲಸದ ಮೂಲಕ ಗುರುತಿಸಿಕೊಂಡವರು ಎಂದರು. 45 ವರ್ಷ ದಾಟಿದವರು ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ವಿಶೇಷವಾಗಿ ಹೃದಯ ಸಂಬಂಧಿ ಕಾಯಿಲೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ತಿಳಿಸಿದರು.

ಪತ್ರಕರ್ತರಾದ ರಂಗನಾಥ, ವೆಂಕಟೇಶ ಹೂಗಾರ, ಜಯಕುಮಾರ ದೇಸಾಯಿ, ಇಮ್ತಿಯಾಜ್ ಸೇರಿದಂತೆ ಹಲವರು ಮೃತರ ಸೇವೆಯನ್ನು ಸ್ಮರಿಸಿದರು. ಕಾರ್ಯಕ್ರಮದಲ್ಲಿ ದತ್ತು ಸರ್ಕಿಲ್, ಶಿವಮೂರ್ತಿ ಹಿರೇಮಠ, ಶಿವಪ್ಪ ಮಡಿವಾಳರ್, ಸಿದ್ಧಯ್ಯಸ್ವಾಮಿ, ಮಂಜುನಾಥ ಸಾಲಿ, ರಾಮಕೃಷ್ಣ ದಾಸರಿ, ವಾಗೀಶ ಪಾಟೀಲ್, ರಾಚಯ್ಯ ಸ್ವಾಮಿ, ಮಹಾನಂದ ನಾಯಕ, ಮಲ್ಲಿಕಾರ್ಜುನಯ್ಯ, ಸುರೇಶ್ ರೆಡ್ಡಿ, ಲಕ್ಷ್ಮಿಪ್ರಸನ್ನ ಜೈನ್, ಖಾದರ್, ಶ್ರೀನಿವಾಸ, ಜಿಲಾನಿ, ಶಿವಕುಮಾರ, ಶ್ಯಾಮಸುಂದರ ಸೇರಿದಂತೆ ಅನೇಕ ಪತ್ರಕರ್ತರು ಪಾಲ್ಗೊಂಡಿದ್ದರು.

ಶ್ರೀ ಮಾದಾರ ಚನ್ನಯ್ಯ ಸೇವಾ ಸಮಿತಿ ರಾಯಚೂರು ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ಅಧ್ಯಕ್ಷರಾಗಿ ರಾಘವೇಂದ್ರ ಬೋರೆಡ್ಡಿ ಆಯ್ಕೆ

ಜೆ.ಎಂ. ವೀರೇಶ ಮಾತನಾಡಿ ಶ್ರೀಮಠ ಸ್ಥಾಪನೆಯ ಹಿನ್ನೆಲೆ ಪ್ರಸ್ತುತ ಶ್ರೀಮಠದ ಸೇವಾ ಕಾರ್ಯಗಳು ಸೇವಾ ಸಮಿತಿಯ ಸ್ಥಾಪನೆಯ ಉದ್ದೇಶ ಮತ್ತು ಅನಿವಾರ್ಯತೆಯ ಬಗ್ಗೆ ವಿಸ್ತ್ರತವಾಗಿ ಸಭೆಗೆ ತಿಳಿಸಿದರು.ಸೇವಾ ಸಮಿತಿಯ ಜಿಲ್ಲಾಧ್ಯಕ್ಷರಾದ ಜೆ.ಎಂ. ಮೌನೇಶ್ ಗ್ರಾಮಾಂತರ ಪದಾಧಿಕಾರಿಗಳು ಪಟ್ಟಿಯನ್ನು ಘೋಷಿಸಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಮಾದಿಗ ಸಮಾಜವನ್ನು ಸಂಘಟಿಸುವ ನಿಟ್ಟಿನಲ್ಲಿ ಸೇವಾ ಸಮಿತಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾ ಸಮಾಜಕ್ಕಾಗಿ ಎಲ್ಲರೂ ಕಂಕಣಬದ್ಧರಾಗಿ ಶ್ರಮವಹಿಸಿ ಕೆಲಸ ಮಾಡುತ್ತ ಶ್ರೀಮಠದ ಆಶಯದಂತೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗಳು ನಮ್ಮ ಸಮಾಜದ ಬಗ್ಗೆ ಜಾಗೃತಿ ಮೂಡಿಸಿ ಸಮಾಜವನ್ನು ಮುನ್ನೆಲೆಗೆ ತರುವ ನಿಟ್ಟಿನಲ್ಲಿ ಸರ್ವರು ಸಹಕರಿಸಬೇಕೆಂದರು.ಮುಖ್ಯ ಅತಿಥಿಗಳಾಗಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಮಾಜದ ಹಿರಿಯ ಮುಖಂಡರಾದ ಡಿ. ಲಕ್ಷ್ಮಣ, ಶರಣಪ್ಪ ನಾಮಾಲಿ ಸೇವಾ ಸಮಿತಿಯ ನಗರ ಅಧ್ಯಕ್ಷ ಹಾಗೂ ಮಾಜಿ ನಗರಸಭೆ ಸದಸ್ಯ ಮಂಚಲ್ ಭೀಮಣ್ಣ, ಗ್ರಾಮಾಂತರ ಯುವ ಮುಖಂಡ ನವೀನ್ ಕುರುಡಿ ಭಾಗವಹಿಸಿದ್ದರು.ಕಾರ್ಯಕ್ರಮದಲ್ಲಿ ಚಂದ್ರ, ಬಂಡ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಪತ್ ಕುರ್ಮಾ, ಜಾಗೀರ ವೆಂಕಟಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ತಿಪ್ಪಣ್ಣ ಮಾಜಿ ತಾಲೂಕು ಪಂಚಾಯತ್ ಸದಸ್ಯ ವೆಂಕಟೇಶ್ ಶಕ್ತಿನಗರ ಸೇವಾ ಸಮಿತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ರೆಡ್ಡಿ ಜಿಲ್ಲಾ ಖಜಂಚಿ ನರಸಿಂಹಲು ಎಂ. ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಬಾಬು,ವೀರೇಶ್ ಶಕ್ತಿನಗರ ಸೇವಾ ಸಮಿತಿಯ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಗಳಾದ ನರಸಪ್ಪ ಸಿಂಗನೊಡಿ ಸೇರಿದಂತೆ ಅಪೇಕ್ಷಿತ ಪದಾಧಿಕಾರಿಗಳು ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಒಡೆಯರಾಜ ಆರೋಲಿ ನಿರ್ವಹಿಸಿದರು

ಪುಸ್ತಕಗಳು ಸಮಾಜದ ಜ್ಞಾನ ವಾಹಿನಿ ಪ್ರೊ ಶಿವಾನಂದ ಕೆಳಗಿನಮನಿ-ಪುಸ್ತಕ ಸಂತೆ ಸಂಕ್ರಾಂತಿ ಸಂಭ್ರಮ

ಸ್ವಾಮಿ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಆಯೋಜನೆ ಮಾಡಿದ ಮೊದಲ ಬಾರಿಗೆ ನಡೆದ ಪುಸ್ತಕ ಸಂತೆ ಮತ್ತು ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿ ಅವರು ಮಾತನಾಡಿ ಪುಸ್ತಕ ಸಂತೆ ಒಂದು ವಿಶೇಷ ಕಾರ್ಯಕ್ರಮ ಇದು ಎಲ್ಲರೂ ಸದುಪಯೋಗ ಪಡೆದುಕೊಳ್ಳಬೇಕು ಇಂದಿನ ಯುವ ಪೀಳಿಗೆ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕಿದೆ ಪುಸ್ತಕಗಳು ಓದುವುದರಿಂದ ಜ್ಞಾನ ಹೆಚ್ಚು ವೃದ್ಧಿಯಾಗುತ್ತದೆ ದೇಶ ಸುತ್ತಬೇಕು ಇಲ್ಲ ಕೋಶ ಓದಬೇಕೆನ್ನುವಂತೆ ಪುಸ್ತಕಗಳು ಪ್ರತಿಯೊಬ್ಬರಿಗೂ ಅವಶ್ಯಕತೆ ಇದೆ ಎಂದು ನುಡಿದರು.

ಪುಸ್ತಕ ಸಂತೆ ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ಸಾಹಿತಿಗಳಾದ ವಿರಹನುಮಾನ ಅಯ್ಯಪ್ಪಯ್ಯ ಹುಡ ಚಿದಾನಂದ ಸಾಲಿ ಜಾನ್ ವೆಸ್ಲಿ.ಬಾಬು ಬಂಡಾರಿಗಲ್. ವೆಂಕಟೇಶ್ ಬೇವಿನ ಬೆಂಚಿ. ಸೈಯದ್ ವಲಿ ಉಪಸ್ಥಿತರಿದ್ದರು.

ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಲವ್ ಯು ಮುದ್ದು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಸ್ವೀಕರಿಸಿದ ಕನ್ನಡದ ಚಿತ್ರನಟ ಸಿದ್ದು ಮೂಲಿಮನಿ. ಸಮಾರಂಭದ ದಿವ್ಯ ಸಾನಿಧ್ಯವನ್ನು ಪೂಜ್ಯಶ್ರೀ ಜ್ಞಾನಾನಂದ ಮಹಾರಾಜ್ ಮಟಮಾರಿ ವಹಿಸಿದ್ದರು

ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಆಗಿರುವ ದುಬೈ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀದೇವಿ ಆರ್ ವಿ ನಾಯಕ ಅವರಿಗೆ ಅಭಿನಂದಿಸಲಾಯಿತು ಈ ಸಂದರ್ಭದಲ್ಲಿ ಅವರು ಮಾತನಾಡಿ ಇದು ನಮ್ಮ ಜಿಲ್ಲೆಗೆ ತಂದ ಒಂದು ಹೆಮ್ಮೆಯ ವಿಷಯ ದುಬೈ ಕನ್ನಡಿಗರಿಗೆ ನಾನು ತುಂಬು ಹೃದಯದಿಂದ ಕೃತಜ್ಞತೆ ಸಲ್ಲಿಸುತ್ತೇನೆ ರಾಜಕೀಯವಾಗಿ ಸಾಮಾಜಿಕವಾಗಿ ಇನ್ನು ನನಗೆ ಇದರಿಂದ ಬಲಬಂದಂತಾಗಿದೆ ಎಂದು ಅವರು ಮಾತನಾಡಿದರು. ತುಂಗಭದ್ರಾ ನಿರ್ಮಲ ಅಭಿಯಾನವನ್ನು ಕೈಗೆತ್ತಿಕೊಂಡು ಸಮಾಜಮುಖಿ ಕೆಲಸ ಮಾಡುತ್ತಿರುವ ಪರಿಸರವಾದಿ ಸಿರವಾರದ ಎನ್ ಉದಯಕುಮಾರ್ ಅವರಿಗೂ ಅಭಿನಂದಿಸಲಾಯಿತು. ವೇದಿಕೆ ಮೇಲೆ ಚಿತ್ರನಟಿ ರವೀಕ್ಷಾ ಶೆಟ್ಟಿ , ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷರಾದ ರೇಖಾ ಬಡಿಗೇ.ೀ.ಜಿಲ್ಲಾ ಕಾರಾಗೃಹ ಆದೀಕ್ಷಕರಾದ ಶ್ರೀಮತಿ ಅನಿತಾ ಹಿರೇಮನಿ. ಮಾಜಿ ನಗರ ಸಭಾ ಸದಸ್ಯರಾದ ನರಸಪ್ಪ ಯಕ್ಲಾಸಪುರ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟಿನ ಪ್ರಧಾನ ಕಾರ್ಯದರ್ಶಿ, ಡಿ ಶ್ರೀನಿವಾಸ್. ಪತ್ರಕರ್ತಆಲಂ ಗಣಿ ಗಬ್ಬುರು ಅತಿಥಿಗಳಾಗಿ ಆಗಮಿಸಿದರು. ವಿವಿಧ ಕ್ಷೇತ್ರದಲ್ಲಿಸಾಧನೆ ಮಾಡಿದ ಯು ಆಂಜನೇಯ. ಸರಸ್ವತಿ. ವಿಜಯಲಕ್ಷ್ಮಿ ಹಿರೇಮಠ. ನರಸಿಂಹಲು ಮರ್ಚೆಡ್. ಮಲ್ಲಿಕಾರ್ಜುನ ಗುಲ್ಬರ್ಗ ಗೌಡ್ರು.ನೂರು ಮಹಮ್ಮದ್..ಬಸನಗೌಡ ಪಾಟೀಲ್. ಮಡಿವಾಳಯ್ಯ ಹಿರೇಮಠ ಮಡಿವಾಳಪ್ಪ ಗಡಗಿ. ಚಿದಾನಂದ ಶಾಸ್ತ್ರಿ, ಸಾಧಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಮತ್ತು ಸ್ವಾಗತವನ್ನು ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ್ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಐದು ಕಲಾತಂಡಗಳು ಭಾಗವಹಿಸಿದ್ದರು ನೀರಮಾನ್ವಿ ತಂಡ ಡೊಳ್ಳು ಕುಣಿತ.ಬಳ್ಳಾರಿಯ ಪುಟ್ಟರಾಜ ತಂಡದಿಂದ ಜಾನಪದ ಗೀತೆ. ಅಂತರಾಷ್ಟ್ರೀಯ ಕಲಾವಿದ ನಾರಾಯಣಪ್ಪ ಗದಗ ಇವರಿಂದ ವೈಲಿನ್ ವಾದ್ಯಗೋಷ್ಠಿ. ಮಹಾಲಕ್ಷ್ಮಿ ತಂಡದಿಂದ ಸುಗಮ ಸಂಗೀತ. ಕೊಪ್ಪಳದ ಲಿಂಗದಳ್ಳಿ ಸರಕಾರಿ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ ಸ್ಥಳೀಯ ಗಾಯಕರಾದ ಅಮರಗೌಡ.ತನುಜಾ ಸುಧಾ. ಸಂತೋಷಿ. ಸೈಯದ್ ವಲಿ ಉತ್ತಮ ಗಾಯನವನ್ನು ಪ್ರದರ್ಶಿಸಿದರು. ಕಾರ್ಯಕ್ರಮ ಮೌನೇಶ್ ವಡವಾಟಿ. ಸುರೇಶ್ ಸಗಮಕುಂಟ ಭಾಗವಹಿಸಿದ್ದರು.ತುಂಬಾ ಅಚ್ಚುಕಟ್ಟಾಗಿ ಪುಸ್ತಕ ಸಂತೆ ಮತ್ತು ಸಂಕ್ರಾಂತಿ ಸಂಭ್ರಮ ಜನಮನ ಗೆದ್ದಿತು..

ಮದ್ಯ, ಮಾದಕ ವಸ್ತುಗಳು ಅತ್ಯಂತ ಗಂಭೀರ ಸಮಸ್ಯೆ : ಶರಣಪ್ಪ ಸಲಾದಪುರ



ಯಾದಗಿರಿ ,ಜ.19-

ಸಮಾಜ ಎದುರಿಸುತ್ತಿರುವ ದೊಡ್ಡ ಸವಾಲುಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳು ಅತ್ಯಂತ ಗಂಭೀರ ಸಮಸ್ಯೆಯಾಗಿದ್ದು, ಇದರಿಂದ ಬಹಳಷ್ಟು ಕುಟುಂಬಗಳು ನಾಶವಾಗುತ್ತಿವೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಹೇಳಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಶಿರವಾಳದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಶಿರವಾಳ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಮದ್ಯ ಮತ್ತು ಮಾದಕ ವಸ್ತುಗಳು ಬಗ್ಗೆ ಜನ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮದ್ಯ ಮತ್ತು ಮಾದಕ ವಸ್ತುಗಳಿಂದ ಗೃಹ ಹಿಂಸೆ ಹೆಚ್ಚುತ್ತಿದ್ದು, ಯುವಕರ ಭವಿಷ್ಯ ಹಾಳಾಗುವುದರ ಜೊತೆಗೆ ಸಾಲ ಬಾಧ್ಯತೆಗಳ ಸಂಖ್ಯೆಯೂ ಹೆಚ್ಚುತ್ತಿದೆ ಎಂದರು.

ಶಾಲಾ-ಕಾಲೇಜು ವಿದ್ಯಾರ್ಥಿಗಳು ಮಾದಕ ವಸ್ತುಗಳ ವಶವಾಗುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಇದು ಕೇವಲ ಅವರದ್ದೇ ಸಮಸ್ಯೆ ಅಲ್ಲ, ಇದು ಸಮಾಜದ ಭವಿಷ್ಯಕ್ಕೆ ಬೆದರಿಕೆ. ಯುವಕರಿಗೆ ಮಾರ್ಗದರ್ಶನ ನೀಡುವುದು, ಅವರಿಗೆ ಸಕಾರಾತ್ಮಕ ವಾತಾವರಣ ಸೃಷ್ಟಿಸುವುದು, ತಪ್ಪು ಮಾರ್ಗಕ್ಕೆ ಹೋಗದಂತೆ ಕಾಪಾಡುವುದು ಪ್ರತಿ ಪೋಷಕರ, ಶಿಕ್ಷಕರ ಮತ್ತು ಗ್ರಾಮದ ಹೊಣೆಗಾರಿಕೆ ಎಂದು ತಿಳಿಸಿದು.

ಗ್ರಾಮ ಮಟ್ಟದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವನ್ನು ತಡೆಯಲು ಸಂಯಮ ಮಂಡಳಿ ಶಕ್ತಿಯುತ ಕ್ರಮಗಳನ್ನು ಕೈಗೊಂಡಿದೆ. ಆದರೆ ಸರ್ಕಾರದ ಇಲಾಖೆಗಳು ಮಾತ್ರ ಕ್ರಮ ಕೈಗೊಂಡರೆ ಸಾಕಾಗುವುದಿಲ್ಲ, ಗ್ರಾಮಸ್ಥರ ಸಹಭಾಗಿತ್ವ ಅನಿವಾರ್ಯ ಎಂದರು.

ಶಿರವಾಳದಂತಹ ಜಾಗೃತಿ ಕಾರ್ಯಕ್ರಮಗಳು ಗ್ರಾಮವನ್ನು ಸುರಕ್ಷಿತ ಮತ್ತು ನಷಾಮುಕ್ತವಾಗಿಸಲು ದೊಡ್ಡ ಹೆಜ್ಜೆಯಾಗಿದ್ದು, ಗ್ರಾಮ ಪಂಚಾಯಿತಿ, ಯುವಕ ಮಂಡಳಿ, ಮಹಿಳಾ ಸಂಘಗಳು, ಶಾಲಾ ಶಿಕ್ಷಕರು ಮತ್ತು ಸ್ಥಳೀಯ ಆಡಳಿತ ಸೇರಿದರೆ ಆರೋಗ್ಯವಂತ ಸಮಾಜದ ನಿಮಾ೯ಣ ಸಾಧ್ಯ ಎಂದು ಶರಣಪ್ಪ ಸಲಾದಪುರ ಅವರು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ, ಪಿಡಿಒ ಮಲ್ಲಿಕಾರ್ಜುನ ವಗ್ಗರ್, ಬಾಪುಗೌಡ ಶಿರವಾಳ, ಮರೆಪ್ಪ, ಆರೋಗ್ಯ ಇಲಾಖೆ ಕಾರ್ಯಕರ್ತರು, ಅಂಗನವಾಡಿ ಶಿಕ್ಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಪುರಂದರ ದಾಸರು ಸಾಕ್ಷಾತ್ ನಾರದ ಮಹರ್ಷಿಗಳ ಅವತಾರ : ಡಾ|| ಕುಲಕರ್ಣಿ

ಕೆಂಭಾವಿ ,ಜ.19-

ನಾಡಿನ ಸಮಗ್ರ ದಾಸಸಾಹಿತ್ಯ ರಚನೆಯಲ್ಲಿ ಪುರಂದರ ದಾಸರೆ ಅಗ್ರಗಣ್ಯರು, ಅವರು ರಚಿಸಿದ ಪ್ರತಿಯೊಂದು ಹಾಡುಗಳು ನಮ್ಮ ಜೀವನವನ್ನು ಬದಲಿಸಬಲ್ಲದು ಎಂದು ವೈದ್ಯಾಧಿಕಾರಿ ಡಾ. ಗಿರೀಶ ಕುಲಕರ್ಣಿ ಹೇಳಿದರು.

ಪುರಂದರ ದಾಸರ ಆರಾಧನಾ ಮಹೋತ್ಸವದ ಅಂಗವಾಗಿ ಪಟ್ಟಣದ ಉತ್ತರಾದಿ ಮಠದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪುರಂದರ ದಾಸರ ಜೀವನ ಚರಿತ್ರೆ ಕುರಿತು ಮಾತನಾಡಿದ ಅವರು, 15ನೇ ಶತಮಾನದಲ್ಲಿ ಅವತರಿಸಿದ ಪುರಂದರ ದಾಸರು ಸಾಕ್ಷಾತ್ ನಾರದ ಮಹರ್ಷಿಗಳ ಅವತಾರವೆಂದು ಪುರಣಗಳು ನಮಗೆ ತಿಳಿಸಿ ಕೊಡುತ್ತವೆ. ಪುರಂದರ ದಾಸರು ತಮ್ಮ ಜೀವಿತಾವಧಿಯವರೆಗೂ ನಾಡಿನ ಪ್ರತಿಯೊಂದು ಊರುಗಳಿಗೆ ಸಂಚರಿಸಿ ಪ್ರತಿಯೊಂದು ಸಮಾಜವನ್ನು ಉದ್ದಾರ ಮಾಡಿದ ಮಹಾನ್ ಸಮಾಜ ಸುಧಾರಕ ಎಂದು ಬಣ್ಣಿಸಿದರು. ಸುಮಾರು 4 ಲಕ್ಷ 75 ಸಾವಿರ ದಾಸರ ಕೀರ್ತನೆಗಳನ್ನು ರಚಿಸಿದ ಕೀರ್ತಿ ಪುರಂದರ ದಾಸರಿಗೆ ಸಲ್ಲುತ್ತದೆ. ಕರ್ನಾಟಕ ಸಂಗೀತ ಪಿತಾಮಹ ಎಂದೇ ಕರೆಯಿಸಿಕೊಂಡ ಪುರಂದರದಾಸರು ಮಾಯಾಮಾಳವಗೌಳ ರಾಗವನ್ನು ಪರಿಚಯಿಸಿದರು. ಒಬ್ಬ ಮಹಾನ ಜಿಪುಣ ವ್ಯಕ್ತಿ ಭಗವಂತನ ಅನುಗ್ರಹವಾದರೆ ಎಂಥಾ ವೈರಾಗ್ಯ ಪಡೆಯುತ್ತಾನೆ ಎಂಬುದು ಇವರ ಜೀವನವೆ ನಮಗೆ ತಿಳಿಸಿಕೊಡುತ್ತದೆ ಎಂದು ಹೇಳಿದರು.

ಚಿತ್ರ ಕಲಾವಿದ ಹಳ್ಳೇರಾವ ಕುಲಕರ್ಣಿ ಮಾತನಾಡಿ, ನಾಡಿನ ದಾಸ ಸಾಹಿತ್ಯವನ್ನು ಬೆಳೆಸಿ ಉಳಿಸುವಲ್ಲಿ ಪ್ರತಿಯೊಂದು ಸಮಾಜದಲ್ಲಿ ಯುವಕರ ಪಾತ್ರ ಅತೀ ಮುಖ್ಯವಾಗಿದೆ. ದಾಸರ ಕೃತಿಗಳನ್ನು ಸಂರಕ್ಷಿಸಲು ಮತ್ತು ಅವುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಸರ್ಕಾರ ರಾಜ್ಯದ ಪ್ರತಿ ವಿಶ್ವವಿದ್ಯಾಲಯದಲ್ಲಿ ದಾಸ ಸಾಹಿತ್ಯ ಅಧ್ಯಯನ ಪೀಠವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಬೆಳಿಗ್ಗೆ ದಾಸರ ವೇಶ ಧರಿಸಿದ ಹಳ್ಳಿಪ್ಪಾಚಾರ್ಯ ಚನ್ನೂರ ಇವರ ನೇತೃತ್ವದಲ್ಲಿ ರಘೂತ್ತಮ ಭಜನಾಮಂಡಳಿಯ ಸರ್ವ ಸದಸ್ಯರು ಹರಿನಾಮ ಸ್ಮರಣೆಯ ಮೂಲಕ ಮನೆಮನೆಗೆ ತೆರಳಿ ಯಾಯಿವಾರ (ಗೋಪಾಳ) ಬೇಡಲಾಯಿತು. ಪುರಂದರ ದಾಸರ ಭಾವಚಿತ್ರಕ್ಕೆ ವಿಶೇಷ ಪೂಜೆ ಅಲಂಕಾರ, ತೀರ್ಥ ಪ್ರಸಾದ ನೆರವೇರಿತು. ಅರ್ಚಕ ರಾಘವೇಂದ್ರಾಚಾರ್ಯ ಮಳ್ಳಿ, ಮೋಹನರಾವ ಕುಲಕರ್ಣಿ, ಡಾ. ಹಳ್ಳೇರಾವ ಕುಲಕರ್ಣಿ, ಗುರುರಾಜ ಕುಲಕರ್ಣಿ, ಪವನ ಆಲಗೂರ, ಪ್ರಮೋದ ಕುಲಕರ್ಣಿ, ಮಧ್ವರಾವ ನಾಡಿಗೇರ, ಹಳ್ಳೇರಾವ ಎಚ್ ಕುಲಕರ್ಣಿ, ಪ್ರಮೋದ, ಪ್ರಭಂಜನ ಸೇರಿದಂತೆ ಹಲವರಿದ್ದರು.

ಏಕಕಾಲಕ್ಕೆ 355 ಕಾನ್‌ಸ್ಟೇಟೆಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳ ವರ್ಗಾವಣೆ

ಬೆಂಗಳೂರು, ಜ.18-

ಸಿಬ್ಬಂದಿಗಳ ಬಹುದಿನದ ಬೇಡಿಕೆಗೆ ಸ್ಪಂದಿಸಿರುವ ರಾಜ್ಯ ಸರ್ಕಾರ ಮುನ್ನೂರ 355 ಮಂದಿ ಕಾನ್‌ಸ್ಟೇಟೆಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳನ್ನು ಏಕಕಾಲಕ್ಕೆ ಅಂತರ್ ಜಿಲ್ಲಾ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ವರ್ಗಾವಣೆ ಬಯಸಿದ ಸಿಬ್ಬಂದಿಗಳು ಸ್ವಂತ ಖರ್ಚಿನಲ್ಲಿ ನಿಯೋಜಿಸಿದ ಸ್ಥಳಕ್ಕೆ ತೆರಳಬೇಕು ಹಾಗೂ ಈವರೆಗಿನ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಇದರಿಮದ ತವರು ಜಿಲ್ಲೆಗೆ ವರ್ಗಾವಣೆಯಾಗಿದ್ದ ಬಹುತೇಕ ಸಿಬ್ಬಂದಿಗಳಿಗೆ ಖುಷಿಯಿದ್ದರೂ, ಈವರೆಗಿನ ಸೇವಾ ಜೇಷ್ಠತೆಯನ್ನು ಕಳೆದುಕೊಂಡ ಕೊರಗು ಕಾಡುವಂತಾಗಿದೆ.

ಸಾಮಾನ್ಯ ಪ್ರಕರಣಗಳಡಿ 10 ವರ್ಷ ಮೇಲ್ಪಟ್ಟ ಸೇವೆಯನ್ನು ಪೂರ್ಣಗೊಳಿಸುತ್ತಿರುವ ಕಾನ್‌ಸ್ಟೇಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳನ್ನು ವರ್ಗಾವಣೆಗೆ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯ ಪೊಲೀಸ್ 2022ರಲ್ಲಿ ವರ್ಗಾವಣೆ ವಿಶೇಷ ನಿಯಮಗಳನ್ನು ರೂಪಿಸಲಾಗಿತ್ತು. ಆ ನಿಯಮಗಳನ್ನು ಆಧರಿಸಿ ಗ್ರೂಪ್ ಸಿ ಮತ್ತು ಗ್ರೂಪ್ ಡಿ ವೃಂದದ ಸಿಬ್ಬಂದಿಗಳ ಪಟ್ಟಿ ಸಿದ್ದಪಡಿಸಲಾಗಿದೆ.

ಆನ್‌ಲೈನ್ ಪೋರ್ಟಲ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳು ಹಾಗೂ ಸ್ವಂತ ಕೋರಿಕೆಯ ಮೇರೆಗೆ ಬಂದಿದ್ದ ಮನವಿಗಳನ್ನು ಆಧರಿಸಿ ವರ್ಗಾವಣೆ ಮಾಡಲಾಗಿದೆ.ಕೋರಿಕೆ ಆಧಾರಿತ



ವರ್ಗಾವಣೆಯಾಗಿರುವುದರಿಂದ ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ, ಸದರಿ ವರ್ಗಾವಣೆಯನ್ನು ಸರ್ಕಾರಿ ನೌಕರರ ಪ್ರಸ್ತುತ ಹುದ್ದೆಯಲ್ಲಿ ಒಂದು ಬಾರಿ ಮಾತ್ರ ಪರಿಗಣಿಸುವುದಾಗಿ, ಮತ್ತೊಮೆ ವರ್ಗಾವಣೆಗೆ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ವರ್ಗಾವಣೆಗೊಂಡಿರುವವರು ಚಾಲ್ತಿ ಶಿಕ್ಷೆ ಅಥವಾ ಇಲಾಖಾ ವಿಚಾರಣೆಯನ್ನು ಎದುರಿಸುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಯಾವುದಾದರೂ ಸಿಬ್ಬಂದಿಗಳು ವರ್ಗಾವಣೆಗೆ ಅರ್ಹರಿಲ್ಲದೆ ಇದ್ದರೆ ತಕ್ಷಣವೇ ಕಚೇರಿಗೆ ಮಾಹಿತಿ ನೀಡಬೇಕು ಎಂದು ಪೊಲೀಸ್ ಮಹಾ ನಿರ್ದೇಶಕರ ಆಡಳಿತ ವಿಭಾಗದ ಕಚೇರಿ ಸೂಚನೆ ನೀಡಿದೆ.

ನಿಗದಿತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳುವ ವೇಳೆಯಲ್ಲಿ ಈ ಹಿಂದಿನ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡುವ ಹೇಳಿಕೆಯನ್ನು ದೃಢೀಕರಿಸಿಕೊಳ್ಳಲು ಸೂಚಿಸಲಾಗಿದೆ.

ಕೆಲವು ಸಿಬ್ಬಂದಿಗಳು ಬೇರೆ ಜಿಲ್ಲೆಗಳಿಂದ ಬೆಂಗಳೂರಿಗೆ ವರ್ಗಾವಣೆ ಪಡೆದುಕೊಂಡಿದ್ದಾರೆ. ಆದರೆ ಬೆಂಗಳೂರಿನಿಂದ ಅನ್ಯ ಜಿಲ್ಲೆಗೆ ವರ್ಗಾವಣೆಯಾಗಿರುವವರ ಸಂಖ್ಯೆ ಕಡಿಮೆ ಇದೆ. ಮಂಗಳೂರು, ಉಡುಪಿ, ರಾಮನಗರ, ಚಿಕ್ಕಬಳ್ಳಾಪುರ, ಮೈಸೂರು, ಕೊಡಗು, ಚಿಕ್ಕಮಗಳೂರು, ಬಾಗಲಕೋಟೆ, ಶಿವಮೊಗ್ಗ, ತುಮಕೂರು ಜಿಲ್ಲೆಗಳಿಂದ ಹೆಚ್ಚಿನ ಸಿಬ್ಬಂದಿಗಳು ಬೆಳಗಾವಿ, ಚಿತ್ರದುರ್ಗ, ಹಾವೇರಿ, ವಿಜಯನಗರ, ದಾವಣಗೆರೆಯಂತಹ ಜಿಲ್ಲೆಗಳಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

355 ಸಿಬ್ಬಂದಿಗಳನ್ನು ಏಕಕಾಲಕ್ಕೆ ವರ್ಗಾವಣೆ ಮಾಡುವ ಮೂಲಕ ಪೊಲೀಸ ಇಲಾಖೆ ಸಿಬ್ಬಂದಿಗಳ ಬಹುದಿನದ ಬೇಡಿಕೆಗೆ ಸ್ಪಂದಿಸಿದೆ. ಅಂತರ್ ಜಿಲ್ಲೆ ವರ್ಗಾವಣೆಗೆ ಅವಕಾಶ ಮಾಡಿಕೊಡಬೇಕು. ಪತಿ ಪತ್ನಿ ಪ್ರಕರಣಗಳನ್ನು ಪರಿಗಣಿಸಬೇಕು ಎಂದು ಪೊಲೀಸ್ ಸಿಬ್ಬಂದಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಮನೆ ಬಾಗಿಲಿಗೆ ಹಲವಾರು ಬಾರಿ ಸುತ್ತು ಹಾಕಿದ್ದರು.

ನೋಂದಣಿ ಅರ್ಹತಾ ಪತ್ರದ ಅವಧಿ ಮುಗಿದಿರುವ ವಾಹನಗಳ ಮಾಲೀಕರಿಗೆ ಸೂಚನೆ

ಕೊಪ್ಪಳ ಜ.17

ಕೊಪ್ಪಳ ಜಿಲ್ಲಾ ವ್ಯಾಪ್ತಿಯ ಕೊಪ್ಪಳ ಪ್ರಾದೇಶಿಕ ಸಾರಿಗೆ ಕಚೇ ರಿಯಲ್ಲಿ ನೋಂದಾಯಿಸಲಾಗಿರುವ ಮೋಟಾರು ಸೈಕಲ್, ಆಟೋ, ಕಾರು, ಸರಕು ವಾಹನಗಳು, ಟ್ರ್ಯಾಕ್ಟರ್ ಅಥವಾ ಟ್ರೈಲರ್ ಲಾರಿ, ಬಸ್ಸು, ಅಂಬುಲೇನ್ಸ್, ಶಾಲಾ ವಾಹನ ಮುಂತಾದ ವರ್ಗದ ವಾಹನಗಳ ಮಾಲೀಕರು ನೋಂದಣಿ ಅರ್ಹತಾ ಪತ್ರದ ಅವಧಿ ಮುಗಿದಿರುವ ತಮ್ಮ ವಾಹನಗಳ ನೋಂದಣಿ ಪತ್ರ, ಅರ್ಹತಾ ಪತ್ರ, ವಿಮಾ ಪತ್ರ, ವಾಯು ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರಗಳನ್ನು ನವೀಕರಿಸಿ ಕೊಳ್ಳಲು ಮತ್ತು ಬಾಕಿ ಇರುವ ಮೋಟಾರು ವಾಹನ ರಸ್ತೆ ತೆರಿಗೆ ಯನ್ನು ಕೂಡಲೇ ಪಾವತಿಸಬೇಕೆಂದು ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ ಹಿರೇಮಠ ಅವರು ತಿಳಿಸಿದ್ದಾರೆ.

ದೇವರಹಿಪ್ಪರಗಿ ಗ್ರಾಮಸಭೆಯಿಂದ ಮಕ್ಕಳ ಭವಿಷ್ಯ ನಿರ್ಮಾಣ



ದೇವರಹಿಪ್ಪರಗಿ,ಜ.18-

ತಾಲ್ಲೂಕಿನ ಹುಣಶ್ಯಾಳ ಗ್ರಾಮದ ಹಿರಿಯ ಉರ್ದು ಪ್ರಾಥಮಿಕ ಶಾಲೆಯಲ್ಲಿ ಗ್ರಾಮ ಪಂಚಾಯಿತಿ ಹುಣಶ್ಯಾಳ, ಸ್ನೇಹ ಸಂಸ್ಥೆ ಕೂಡ್ಲಿಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಸಹಯೋಗದಲ್ಲಿ ಶುಕ್ರವಾರ ನಡೆದ ಮಕ್ಕಳ ಹಕ್ಕುಗಳ ಗ್ರಾಮಸಭೆಯಲ್ಲಿ ಮಾತನಾಡಿದರು.

ಮಕ್ಕಳು ಹೇಳಿದಂತೆ ಶೌಚಾಲಯ, ಕುಡಿಯುವ ನೀರು, ಶಾಲಾ ಆವರಣದ ಗೋಡೆ, ಶಿಥಿಲ ಕೊಠಡಿಗಳ ದುರಸ್ತಿ, ಆಟೋಪಕರಣಗಳು, ಬೆಂಚ್, ಆಟದ ಮೈದಾನ ಮೊದಲಾದ ಬೇಡಿಕೆಗಳಿಗೆ ಸ್ಪಂದಿಸಲಾಗುವುದು ಎಂದರು.

ಸ್ನೇಹಸಂಸ್ಥೆ ಸಂಯೋಜಕ ಸಾಗರ ಘಾಟಗೆ ಮಾತನಾಡಿ, ಮಕ್ಕಳ ಹಕ್ಕುಗಳ ಬಗ್ಗೆ ತಿಳಿಸಿದರು.

ಗ್ರಾಮದ ಸರ್ಕಾರಿ ಉರ್ದು ಪ್ರೌಢಶಾಲೆಯ ಮುಖ್ಯಶಿಕ್ಷಕ ಎಸ್.ಎಸ್.ಗಡೇದ, ಮಾದರಿ ಶಾಲೆಯ ಮುಖ್ಯಶಿಕ್ಷಕ ಎಂ.ಎಸ್.ಹಂದಿಗನೂರ, ಇತರರು ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬೋರಮ್ಮ ಪೂಜಾರಿ ಅಧ್ಯಕ್ಷತೆ ವಹಿಸಿ ಉದ್ಘಾಟಿಸಿದರು.

ಹುಣಶ್ಯಾಳ ಪಂಚಾಯಿತಿ ವ್ಯಾಪ್ತಿಯ ಹುಣಶ್ಯಾಳ, ಆಲಗೂರ, ಅಸಂತಾಪೂರ, ಚಟ್ನಳ್ಳಿ, ಆನೆಮಡು, ಸಲಾದಹಳ್ಳಿ ಗ್ರಾಮಗಳ ಶಾಲೆಗಳ ಮಕ್ಕಳು ತಮ್ಮ ಶಾಲೆಯಲ್ಲಿ ಇರುವ ಮೂಲ ಸಮಸ್ಯೆಗಳ ಬಗ್ಗೆ ಹೇಳಿದರು. ಮಕ್ಕಳ ಸಭೆಯಲ್ಲಿ ಬೇಡಿಕೆ ಪಟ್ಟಿ ಪಡೆದರೂ ಅವುಗಳನ್ನು ಅನುಷ್ಠಾನ ಮಾಡುತ್ತಿಲ್ಲ ಎಂದು ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಹುಸೇನಸಾಬ ನಾಗಾವಿ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಅಬ್ದುಲಗನಿ ತಿಂಥಣಿ, ಎ.ಆರ್.ಸವಾರ, ಸಾಹಿತಿ, ಶಿಕ್ಷಕ ಮುತ್ತು ಕುಂಟೋಜಿ, ಭಾಗಣ್ಣ ಹಾಳಕಿ, ಸುವರ್ಣ, ಆರೋಗ್ಯ ಇಲಾಖೆ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಗ್ರಾಮ ಪಂಚಾಯಿತಿ ಸದಸ್ಯರು, ಪಾಲಕರು, ಮುಖ್ಯ ಶಿಕ್ಷಕರು ಇದ್ದರು.

ಪುರಾಣ, ಪ್ರವಚನ ಶ್ರವಣದಿಂದ ಮನುಷ್ಯನಲ್ಲಿ ಶಾಂತಿ, ನೆಮ್ಮದಿ ಅಭಿವೃದ್ಧಿ : ತಡಕಲ ಶಾಸ್ತ್ರಿಗಳು

ಶ್ರೀಮಠದ ಪೂಜ್ಯಶ್ರೀ ಜ್ಞಾನಾನಂದ ಮಹಾರಾಜರು ವಹಿಸಿದ್ದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀದೇವಿ ಆರ್.ವಿ. ನಾಯಕ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿಗಳು, ದುಬೈ ವಿಶ್ವ ಕನ್ನಡ ಸಮ್ಮೇಳನ ಅಧ್ಯಕ್ಷರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಎನ್. ಉದಯಕುಮಾರ ಶಿರವಾರ ನಿರ್ಮಲ ತುಂಗಭದ್ರಾ ಅಭಿಯಾನದ ಮುಖ್ಯಸ್ಥರು, ಸಿದ್ದು ಮೂಲಿಮನಿ ಚಿತ್ರ ನಟರು, ಉತ್ತರ ದೇವಿ ಮಠಪತಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅನಿತಾ ಹಿರೇಮನಿ ಅಧೀಕ್ಷಕರು, ಜಿಲ್ಲಾ ಕಾರಾಗೃಹ ಇವರು ವೇದಿಕೆಯ ಮೇಲೆ ಆಶೀನರಾಗಿದ್ದರು.

ಪ್ರಾರಂಭದಲ್ಲಿ ಹಿರಿಯ ಕಲಾವಿದೆ ಮಹಾಲಕ್ಷ್ಮೀಯವರ ಪ್ರಾರ್ಥನಾ ಮತ್ತು ನಾಡಗೀತೆಯನ್ನು ಪ್ರಸ್ತುತ ಪಡಿಸಿದರು.

ಮಟಮಾರಿ ಶ್ರೀಗಳು ಹಾಗೂ ಸರ್ವ ಗಣ್ಯರು ಸೇರಿ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ನಗರದ ಹಿರಿಯ ಕಲಾವಿದರಾದ ನರಸಿಂಹಲು ಜಾಗೀರ ಮರ್ಚೆಡರವರಿಗೆ ಆಧ್ಯಾತ್ಮ ಚಿಂತನೆ ಹಾಗೂ ನಿಜಗುಣ ಕೈವಲ್ಯ, ಸರ್ಪಭೂಷಣ ಕೈವಲ್ಯ, ಶಿಶುನಾಳ ಶರೀಫರ ತತ್ವಪದಗಳು, ಇನ್ನೂ ಅನೇಕ

ಕಬ್ಬಡ್ಡಿಯಲ್ಲಿ ದೇವದುರ್ಗ ಪ್ರಥಮ ಸ್ಥಾನ




ದೇವದುರ್ಗ,ಜ.19-

ರಾಯಚೂರು ಜಿಲ್ಲಾ ಉತ್ಸವ ನಿಮಿತ್ತ ಜಿಲ್ಲಾಡಳಿತದಿಂದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ದೇವದುರ್ಗ ಕಂದಾಯ ಇಲಾಖೆ ತಂಡ ಕಬ್ಬಡ್ಡಿ ಆಟದಲ್ಲಿ ಪ್ರಥಮ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದೆ. ಫೈನಲ್ ಪಂದ್ಯದಲ್ಲಿ ಈಚನಾಳ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿ ಪ್ರಥಮ ಸ್ಥಾನ ಪಡೆಯಿತು. ತಂಡದಲ್ಲಿ ಆಟಗಾರರಾದ ವೀರೇಶ್, ಅಭಿಷೇಕ, ವಸಂತ, ರಮೇಶ, ಲಿಂಗರಾಜು, ಮಹೇಶ, ಶಿವರಾಜ, ನಾಗರಾಜ್, ಕೊರವಯ್ಯ, ಗೌಸುದ್ದೀನ್ ,ನಿತಿನ್ ಉತ್ತಮ ಸಾಧನೆ ತೋರಿದರು. ನೌಕರರ ಇಲಾಖೆ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಮಣಿಪುರ : ಮೋದಿ ಸರ್ಕಾರದ ವೈಫಲ್ಯಕ್ಕೆ ಅತ್ಯಾಚಾರ ಸಂತ್ರಸ್ತೆ ಸಾವು!



ಈ ದೇಶದಲ್ಲಿ ಬೇಟಿ ಬಚಾವೋ ಬಗ್ಗೆ ದೊಡ್ಡ ದೊಡ್ಡ ಮಾತಾಡುತ್ತಾರೆ. ಮಹಿಳಾ ಸುರಕ್ಷತೆ ಬಗ್ಗೆ ಅಬ್ಬರಿಸಿ ಘೋಷಣೆಗಳನ್ನು ಕೂಗುತ್ತಾರೆ, ಆದರೆ ಮಣಿಪುರದ ಕುಕಿ ಯುವತಿಯ ಸಾವಿನ ಬಗ್ಗೆ ಪ್ರಧಾನಿ ತುಟಿಗಳಿಗೆ ಹೊಲಿಗೆ ಹಾಕಿದಂತೆ ಮೌನವಾಗಿದ್ದಾರೆ. ಸರ್ಕಾರ ಮೌನವಾಗಿದೆ, ನ್ಯಾಯವೂ ಮೌನವಾಗಿದೆ. ಅವಳು ಒಬ್ಬಳಲ್ಲ. ಸಾವಿರಾರು ನಿರಾಶ್ರಿತರ ಪ್ರತಿನಿಧಿಯಾಗಿದ್ದಾಳೆ.

ಮಣಿಪುರದಲ್ಲಿ ಎರಡೂವರೆ ವರ್ಷಗಳ ಹಿಂದೆ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದ ಕುಕಿ ಯುವತಿ, ಘಟನೆಯ ಆಘಾತ ಮತ್ತು ದೈಹಿಕ ಗಾಯಗಳಿಂದ ಚೇತರಿಸಿಕೊಳ್ಳಲಾಗದೆ ಇತ್ತೀಚೆಗೆ ನಿಧನರಾಗಿದ್ದಾರೆ. ಕುಟುಂಬವು ನ್ಯಾಯಕ್ಕಾಗಿ ಹೋರಾಡುತ್ತಿದ್ದು, ಮಗಳು ಜೀವಂತವಿದ್ದಾಗ ನ್ಯಾಯ ಸಿಗದಿರುವುದಕ್ಕೆ ತೀವ್ರ ದುಃಖ ವ್ಯಕ್ತಪಡಿಸಿದೆ. ಈ ದುರಂತ ಮಣಿಪುರದ ಜನಾಂಗೀಯ ಸಂಘರ್ಷಗಳ ಭೀಕರ ಪರಿಣಾಮವನ್ನು ಎತ್ತಿ ತೋರಿಸುತ್ತದೆ. ಅವಳನ್ನು ಕೊಂದದ್ದು ಕತ್ತಿ ಅಲ್ಲ, ಬುಲೆಟ್ ಅಲ್ಲ. ಅವಳನ್ನು ಕೊಂದದ್ದು ಆಳವಾದ ಮಾನಸಿಕ ಆಘಾತ, ದೈಹಿಕ ಗಾಯಗಳು ಮತ್ತು ನ್ಯಾಯ ಕೊಡಿಸದ ಮೋದಿ ಅವರ ಡಬಲ್ ಎಂಜಿನ್ ಸರ್ಕಾರ. ಮಣಿಪುರದಲ್ಲಿ ಅವಳನ್ನು ಅತ್ಯಾಚಾರ ಮಾಡಿದವರು ವಿಕೃತಕಾಮಿ ದುರುಳರು. ಆದರೆ ಅವಳನ್ನು ಸಾಯಲು ಬಿಟ್ಟಿದ್ದು ಬಿಜೆಪಿ ಸರ್ಕಾರ.

ಮಣಿಪುರದ ರಕ್ತಸಿಕ್ತ ಭೂಮಿಯಲ್ಲಿ, ಎರಡುವರೆ ವರ್ಷಗಳ ಹಿಂದೆ ಮೈಥೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಭುಗಿಲೆದ್ದ ಘರ್ಷಣೆಯ ಕರಿ ನೆರಳು ಇನ್ನೂ ಹರಡಿಕೊಂಡೇ ಇದೆ. 2023ರ ಮೇ ತಿಂಗಳಲ್ಲಿ, ಇಂಫಾಲ್ ನಗರದಲ್ಲಿ ಕುಕಿ ಬುಡಕಟ್ಟಿನ ಯುವತಿ ತನ್ನ ದೈನಂದಿನ ಕೆಲಸದಲ್ಲಿ ಮುಳುಗಿದ್ದಳು. ಅವಳು ತನ್ನ ಸಂಬಂಧಿಕರ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡುತ್ತಿದ್ದಳು, ಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತಿದ್ದಳು, ಖುಷಿಯಿಂದ ಜೀವನವನ್ನ ನಡೆಸುತ್ತಿದ್ದಳು. ಆದರೆ ಮೇ 15ರಂದು, ಎಟಿಎಂಗೆ ಹಣ ತೆಗೆಯಲು ಹೋದ ಅವಳನ್ನು ಒಂದು ಗುಂಪು ಅಪಹರಿಸಿತು. ಸಾಮೂಹಿಕ ಅತ್ಯಾಚಾರ ಮಾಡಿ, ದೈಹಿಕ ಹಿಂಸೆಕೊಟ್ಟರು. ಅದು ಮಾನವೀಯತೆಯನ್ನೇ ಮರೆತ ಅತೀಕ್ರೂರ ಹಿಂಸೆಯಾಗಿತ್ತು. ಆ ದಿನದಿಂದ ಅವಳು ಪ್ರತಿದಿನ ಸತ್ತು ಬದುಕುತ್ತಿದ್ದಳು.

ಜುಲೈ 2023ರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಮಹಿಳೆ, ಮೈಥೇಯಿ ಸಮುದಾಯದ ಕೆಲ ಪುರುಷರಿಂದ ತಾನು ಅನುಭವಿಸಿದ ಭೀಕರ ಯಾತನೆಯನ್ನು ವಿವರಿಸಿದ್ದರು. ಘಟನೆಯಲ್ಲಿ ಅವರು ತೀವ್ರ ಗಾಯಗಳೊಂದಿಗೆ ಪಾರಾಗಿದ್ದಳು. ಗಡಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದ ನಡುವೆ, ಲೈಂಗಿಕ ದೌರ್ಜನ್ಯದ ಎರಡು ತಿಂಗಳ ನಂತರ ಜುಲೈ 21 ರಂದು ಪೊಲೀಸರು ದೂರು ದಾಖಲಿಸಿಕೊಳ್ಳುತ್ತಾರೆ. ಪ್ರಥಮ ಮಾಹಿತಿ ವರದಿಯಲ್ಲಿ (ಎಫ್‌ಐಆರ್), ತನ್ನನ್ನು ಕಪ್ಪು ಶಸ್ತ್ರಧಾರಿ ನಾಲ್ವರು ಶಸ್ತ್ರಧಾರಿ ಪುರುಷರು ಗುಡ್ಡಗಾಡು ಪ್ರದೇಶಕ್ಕೆ ಕರೆದೊಯ್ದರು. ಅಲ್ಲಿ ಮೂವರು ಸರದಿಯಲ್ಲಿ ತನ್ನ ಮೇಲೆ ಅತ್ಯಾಚಾರ ಎಸಗಿದರು ಎಂದು ಮಹಿಳೆ ಆರೋಪಿಸಿದ್ದರು. ಜನಾಂಗೀಯ ಹಿಂಸಾಚಾರದ ವೇಳೆ ಶಸ್ತ್ರಾಸ್ತ್ರ ಹಿಡಿದ ಮೈಥೇಯಿ ಗುಂಪಿನ ಸದಸ್ಯರಾದ ಅರಾಂಬೈ ಟೆಂಗೋಲ್ ಕಪ್ಪು ಶರ್ಟ್ ಧರಿಸಿದ್ದರು. ಮೀರಾ ಪೈಬಿಯ ಕೆಲವು ಸದಸ್ಯರು ಆಕೆಯನ್ನು ಮೈಥೇಯಿ ಪುರುಷರಿಗೆ ಹಸ್ತಾಂತರಿಸಿದ್ದಾರೆ ಎಂದು ಕುಕಿ ಸಂಘಟನೆಗಳು ಆರೋಪಿಸಿವೆ. ನಾಲ್ವರು ಪುರುಷರು ನನ್ನನ್ನು ಬಿಳಿ ಬೊಲೆರೊದಲ್ಲಿ ಕರೆದುಕೊಂಡು ಹೋದರು. ಅವರು ನನ್ನನ್ನು ಕರೆದುಕೊಂಡು ಹೋಗುತ್ತಿದ್ದಾಗ, ಚಾಲಕನನ್ನು ಹೊರತುಪಡಿಸಿ ಮೂವರು ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದರು. ನಂತರ ನನ್ನನ್ನು ಬೆಟ್ಟಕ್ಕೆ ಕರೆದೊಯ್ದು ಚಿತ್ರಹಿಂಸೆ ನೀಡಿ ಹಲ್ಲೆ ನಡೆಸಿದರು ಎಂದು ಸಂತ್ರಸ್ತೆ ಜುಲೈ 2023 ರಲ್ಲಿ ಹೇಳಿದ್ದರು.

ಅವರು ನನ್ನ ಮೇಲೆ ಏನೇನು ಹೀನಾಯ ಕೆಲಸಗಳನ್ನು ಮಾಡಬಹುದೋ ಅದನ್ನೆಲ್ಲಾ ಮಾಡಿದರು ಮತ್ತು ರಾತ್ರಿಯಿಡೀ ನನಗೆ ತಿನ್ನಲು ಏನೂ ಕೊಡಲಿಲ್ಲ. ಅವರು ನೀರನ್ನೂ ಕೊಡಲಿಲ್ಲ. ಬೆಳಗ್ಗೆ ಹೇಗೋ, ಶೌಚಾಲಯಕ್ಕೆ ಹೋಗುವ ನೆಪದಲ್ಲಿ ನಾನು ಕಣ್ಣಿಗೆ ಕಟ್ಟಿದ್ದ ಬಟ್ಟೆ ತೆಗೆದು ಸುತ್ತಲೂ ಏನು ನಡೆಯುತ್ತಿದೆ ಎಂದು ನೋಡಲು ಪ್ರಯತ್ನಿಸಿದೆ. ನಂತರ ನಾನು ಬೆಟ್ಟದ ಕೆಳಗೆ ಓಡಿ ತಪ್ಪಿಸಿಕೊಂಡೆ ಎಂದು ಅವಳು ಹೇಳಿದ್ದಳು. ತರಕಾರಿಗಳ ರಾಶಿಯ ಕೆಳಗೆ ಅಡಗಿಕೊಂಡಿದ್ದ ಆಕೆಯನ್ನು ಆಟೋರಿಕ್ಷಾ ಚಾಲಕನೊಬ್ಬ ಸುರಕ್ಷಿತವಾಗಿ ಕರೆದುಕೊಂಡು ಹೋದನು. ಆಕೆ ಕಾಂಗ್ಪೋಕ್ಪಿ ತಲುಪುವಲ್ಲಿ ಯಶಸ್ವಿಯಾದಳು. ಅಲ್ಲಿ ಆಕೆಯನ್ನು ನೆರೆಯ ನಾಗಾಲ್ಯಾಂಡ್‌ನ ರಾಜಧಾನಿ ಕೊಹಿಮಾದಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎರಡು ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಡಿದ್ದ ಯುವತಿ ಮಾನಸಿಕವಾಗಿ ಕುಗ್ಗಿ ಜನವರಿ 10ರಂದು ಇಹಲೋಕ ತ್ಯಜಿಸಿದ್ದಾಳೆ.

ಆ ಯುವತಿಯ ತಾಯಿ, ತನ್ನ ಮಗಳನ್ನು ನೆನಪಿಸಿಕೊಳ್ಳುತ್ತಾ ಕಣ್ಣೀರು ಸುರಿಸುತ್ತಾರೆ ''ನನ್ನ ಮಗಳು ತುಂಬಾ ಮುಗ್ಧ ಮನಸ್ಸಿನ ಹುಡುಗಿಯಾಗಿದ್ದಳು. ಅವಳಿಗೆ ಸ್ನೇಹಿತರಿದ್ದರು, ಜೀವನವನ್ನು ಆನಂದಿಸುತ್ತಿದ್ದಳು. ಆದರೆ ಆ ದಿನದ ನಂತರ, ಅವಳು ಎಂದೂ ಹಿಂದಿರುಗಲಿಲ್ಲ. ಆಘಾತದಿಂದ ಉಸಿರಾಟದ ತೊಂದರೆ, ನಿದ್ರೆಯ ಸಮಸ್ಯೆ, ಮಾನಸಿಕ ಅಸ್ವಸ್ಥತೆ ಎಲ್ಲವೂ ಅವಳನ್ನು ಕಾಡಿತು.'' ಅವಳು ಗುವಾಹಟಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು, ಆದರೆ ಜನವರಿ 10, ರಂದು, ಆ ಚಿಕ್ಕ ಹುಡುಗಿ ಶಾಶ್ವತವಾಗಿ ನಮ್ಮಿಂದ ದೂರವಾಗಿದ್ದಾಳೆ'' ಎಂದು ತಮ್ಮ ನೋವನ್ನ ಮಾಧ್ಯಮದ ಮುಂದೆ ತೋಡಿಕೊಂಡಿದ್ದಾರೆ.

ಗುವಾಹಟಿಯ ಆಸ್ಪತ್ರೆಯ ಹಾಸಿಗೆಯಲ್ಲಿ ಅವಳು ಹೋರಾಡುತ್ತಿದ್ದಾಗ, ಮಣಿಪುರದ ರಸ್ತೆಗಳಲ್ಲಿ ಇನ್ನೂ ಸಾವಿರಾರು ನಿರಾಶ್ರಿತರು ಆಶ್ರಯಕ್ಕಾಗಿ ಅಲೆಯುತ್ತಿದ್ದರು. ಘರ್ಷಣೆಯಿಂದಾಗಿ ಹಾನಿಗೊಳಗಾದವರು ಶಿಬಿರಗಳಲ್ಲಿ ಕುಳಿತು ನ್ಯಾಯಕ್ಕಾಗಿ ಕಾಯುತ್ತಿದ್ದರು. ರಾಷ್ಟ್ರಪತಿ ಆಡಳಿತದ ಹೆಸರಿನಲ್ಲಿ ಮಣಿಪುರವನ್ನ ಕೇಂದ್ರವೇ ನೇರವಾಗಿ ನಿಯಂತ್ರಣದಲ್ಲಿಟ್ಟುಕೊಂಡಿದ್ದರೂ, ಘರ್ಷಣೆಗಳು ನಿಲ್ಲಲಿಲ್ಲ. ಸಾವಿರಾರು ಜನರು ಇನ್ನೂ ನಿರಾಶ್ರಿತ ಶಿಬಿರಗಳಲ್ಲಿ ಬದುಕುತ್ತಿದ್ದಾರೆ, ಅನೇಕ ಪ್ರಕರಣಗಳಲ್ಲಿ ನ್ಯಾಯ ಸಿಗದೇ ನ್ಯಾಯಕ್ಕಾಗಿ ಅಲೆಯುತ್ತಿದ್ದಾರೆ. ಈ ಯುವತಿಯ ಪ್ರಕರಣದಲ್ಲಿ ಎಫ್‌ಐಆರ್ ದಾಖಲಾಗಿದ್ದರೂ, ಎರಡು ವರ್ಷಗಳ ನಂತರವೂ ಯಾವುದೇ ಬಂಧನವಾಗಿಲ್ಲ. ತನಿಖೆ ಸ್ಥಗಿತಗೊಂಡಿದೆ, ನ್ಯಾಯಾಲಯದ ಕದಗಳು ಸಂತ್ರಸ್ತೆಯ ಪಾಲಿಗೆ ಮುಚ್ಚಿವೆ.

ಪ್ರಶ್ನೆ ಇಲ್ಲಿಯೇ ಶುರುವಾಗುತ್ತದೆ, ಅವಳು ಬದುಕಿದ್ದಾಗ ನ್ಯಾಯ ಯಾಕೆ ಸಿಗಲಿಲ್ಲ ಅಪರಾಧಿಗಳು ಎಲ್ಲಿ? ಬಂಧನ ಯಾಕಾಗಿಲ್ಲ? ಚಾರ್ಜ್‌ಶೀಟ್‌ಗಳು ಎಲ್ಲಿ? ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳು ಎಲ್ಲಿ? ಸಾಮೂಹಿಕ ಅತ್ಯಾಚಾರ ನಡೆದ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಇದ್ದರೂ ಸುರಕ್ಷತೆ ಯಾಕಿಲ್ಲ? ಮೋದಿ ಸರ್ಕಾರದ ವೈಫಲ್ಯ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ರಾಷ್ಟ್ರಪತಿ ಆಡಳಿತದ ಹೆಸರಿನಲ್ಲಿ ಅಧಿಕಾರ ಹಿಡಿದ ಸರ್ಕಾರ, ಜನರ ಜೀವ ಉಳಿಸಲು ವಿಫಲವಾದರೆ, ಅಂತಹ ಸರ್ಕಾರಕ್ಕೆ ಯಾವ ಹೆಸರು ಕೊಡಬೇಕು? ಮಣಿಪುರದ ಘರ್ಷಣೆಗಳು 2023ರಲ್ಲಿ ಆರಂಭವಾದಾಗಿನಿಂದ, ಕೇಂದ್ರವು ಶಾಂತಿ ಸ್ಥಾಪನೆಗೆ ಹಲವು ಭರವಸೆಗಳನ್ನು ನೀಡಿತು. ಆದರೆ ವಾಸ್ತವದಲ್ಲಿ, ಜನಾಂಗೀಯ ಹಿಂಸೆ ಮುಂದುವರಿದಿದೆ, ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಿದ್ದವು. ಸಿಪಿಐ(ಎಂ) ನಾಯಕಿ ಬೃಂದಾ ಕಾರಟ್ ಹೇಳಿದಂತೆ, ''ಈ ಸಾವು ದ್ವೇಷದ ರಾಜಕೀಯ ಮತ್ತು ನ್ಯಾಯದ ವೈಫಲ್ಯಕ್ಕೆ ಸಾಕ್ಷಿ.'' ಕುಕಿ ಸಂಘಟನೆಗಳು ಪ್ರತ್ಯೇಕ ಆಡಳಿತಕ್ಕಾಗಿ ಕೂಗುತ್ತಿವೆ, ಏಕೆಂದರೆ ಕೇಂದ್ರದ ನಿಯಂತ್ರಣದಲ್ಲೂ ಅವರಿಗೆ ಸುರಕ್ಷತೆ ಸಿಗುತ್ತಿಲ್ಲ.

ಕಳೆದ ಒಂದು ವರ್ಷದಿಂದ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವಿದೆ. ಅರ್ಥವೇನು? ರಾಜ್ಯ ಸರ್ಕಾರ ಇಲ್ಲ, ಮುಖ್ಯಮಂತ್ರಿ ಇಲ್ಲ ಪೊಲೀಸ್ ವ್ಯವಸ್ಥೆ ಕೇಂದ್ರದ ಕೈಯಲ್ಲಿದೆ, ಕಾನೂನು ಕೇಂದ್ರದ ಕೈಯಲ್ಲಿದೆ, ಜವಾಬ್ದಾರಿ ಸಂಪೂರ್ಣವಾಗಿ ಮೋದಿ ಸರ್ಕಾರದ ಕೈಯಲ್ಲಿದೆ, ಮಣಿಪುರದ ಜವಾಬ್ದಾರಿ ನೇರವಾಗಿ ಕೇಂದ್ರ ಸರ್ಕಾರ ಅಂದರೆ ಪ್ರಧಾನಿ ಮೋದಿ ಅವರ ಹೊಣೆಯಾಗಿದೆ. ಹಾಗಿದ್ದರೆ ಕೇಳಲೇಬೇಕು, ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಗುವನ್ನಾದರೂ ಉಳಿಸಲಾರದೆ ಹೋದರೇ? ಆಕೆಗೆ ನ್ಯಾಯ ಕೊಡಿಸಲು ವಿಫಲರಾದರೇ? ಜನವರಿ 18ರಂದು, ಚುರಾಚಂದಪುರದಲ್ಲಿ ನಡೆದ ಮೇಣದಬತ್ತಿ ಜಾಗರಣೆಯಲ್ಲಿ ಸಾವಿರಾರು ಜನರು ಸೇರಿದರು. ಅವರ ಕಣ್ಣುಗಳಲ್ಲಿ ನೋವು, ಕೋಪ, ಮತ್ತು ನ್ಯಾಯದ ಬೇಡಿಕೆ ಎದ್ದು ಕಾಣುತ್ತಿತ್ತು. ಅನೇಕರು ಇನ್ನೂ ಹೋರಾಡುತ್ತಿದ್ದಾರೆ, ಆದರೆ ಸರ್ಕಾರದ ಮೌನವು ಅವರ ನೋವನ್ನು ಹೆಚ್ಚಿಸುತ್ತಿದೆ. ಈ ದುರಂತವು ಮಣಿಪುರದ ಸಾವಿರಾರು ಜೀವಗಳ ನೋವಿನ ಪ್ರತಿಬಿಂಬವಾಗಿದೆ. ಮೋದಿ ಸರ್ಕಾರಕ್ಕೆ ನಿಜವಾಗಿಯೂ ರಕ್ಷಣೆ ನೀಡಲು ಸಾಧ್ಯವಿಲ್ಲವೇ? ಅಥವಾ ಇಲ್ಲೂ ರಾಜಕೀಯವನ್ನೇ ಅಸ್ತ್ರ ಮಾಡಿಕೊಂಡಿದ್ದೀರಾ?

ಈ ದೇಶದಲ್ಲಿ ಬೇಟಿ ಬಚಾವೋ ಬಗ್ಗೆ ದೊಡ್ಡ ದೊಡ್ಡ ಮಾತಾಡುತ್ತಾರೆ. ಮಹಿಳಾ ಸುರಕ್ಷತೆ ಬಗ್ಗೆ ಅಬ್ಬರಿಸಿ ಘೋಷಣೆಗಳನ್ನ ಕೂಗುತ್ತಾರೆ, ಆದರೆ ಮಣಿಪುರದ ಕುಕಿ ಯುವತಿಯ ಸಾವಿನ ಬಗ್ಗೆ ಪ್ರಧಾನಿ ತುಟಿಗಳಿಗೆ ಹೊಲಿಗೆ ಹಾಕಿದಂತೆ ಮೌನವಾಗಿದ್ದಾರೆ. ಸರ್ಕಾರ ಮೌನವಾಗಿದೆ, ನ್ಯಾಯವೂ ಮೌನವಾಗಿದೆ. ಅವಳು ಒಬ್ಬಳಲ್ಲ. ಅವಳು ಸಾವಿರಾರು ನಿರಾಶ್ರಿತರ ಪ್ರತಿನಿಧಿಯಾಗಿದ್ದಾಳೆ. ಸರ್ಕಾರದ ವೈಫಲ್ಯದಿಂದ ಒಬ್ಬ ಮಹಿಳೆ ನಿಧಾನವಾಗಿ ಸತ್ತರೆ, ಅದಕ್ಕೆ ಯಾರು ಹೊಣೆ? ಅಪರಾಧಿಗಳೇ ಅಥವಾ ಅವರನ್ನು ರಕ್ಷಿಸದ ವ್ಯವಸ್ಥೆಯೇ?

ಸಾಮೂಹಿಕ ಅತ್ಯಾಚಾರ ಪೀಡಿತ ಯುವತಿ ನಿಧಾನವಾಗಿ ಸಾಯುತ್ತಿದ್ದಾಗ, ನ್ಯಾಯ ಸಿಗದೆ ಕಣ್ಣುಮುಚ್ಚಿದಾಗ, ಸಾವಿರಾರು ಜನ ಶಿಬಿರಗಳಲ್ಲಿ ಕೊಳೆಯುತ್ತಿದ್ದಾಗ, ಈ ಸರ್ಕಾರದ ಯಶಸ್ಸುಗಳು ಯಾವ ನೈತಿಕ ನೆಲೆಯಲ್ಲಿ ನಿಂತಿವೆ? ಅವಳು ಬದುಕುಳಿಯಬಹುದಿತ್ತು, ಆದರೆ ಸರ್ಕಾರ ಅವಳನ್ನು ಉಳಿಸಲಿಲ್ಲ. ಇದು ಕೇವಲ ಒಂದು ಮಣಿಪುರದ ಕತೆಯಲ್ಲ. ಇದು ಮೋದಿ ಸರ್ಕಾರದ ದುರಾಡಳಿವ, ವೈಫಲ್ಯಕ್ಕೆ ಸಿಕ್ಕ ಹಲವು ಮುಗ್ಧ ಜನರ ಕತೆ.

ಮೋದಿ ಸರ್ಕಾರ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಕಾಯ್ದೆಗೆ ಹೆದರಿದ್ದೇಕೆ?



ಕೇಂದ್ರ ಗಾಂಧಿ ಹೆಸರಿನ ಉದ್ಯೋಗ ಖಾತ್ರಿ ಕಾನೂನನ್ನು ತೆಗೆದು ಹಾಕಿ, ರಾಮನ ಹೆಸರಿನಲ್ಲಿ ಇದನ್ನು ತನ್ನ ತೆಕ್ಕೆಗೆ ತೆದುಕೊಂಡು ಮೂಗಿಗೆ ತುಪ್ಪ ಹಚ್ಚುವ ಸುಳ್ಳು ಉದ್ಯೋಗ ಭರವಸೆಯ ಕಾನೂನನ್ನು ತಂದು, ಗ್ರಾಮೀಣ ಕೂಲಿಕಾರರನ್ನು ಮೋಸ ಮಾಡುವ ಕುತಂತ್ರಕ್ಕೆ ಈ ಸರ್ಕಾರ ಕೈ ಹಾಕಿದೆ. ಈ ಮೂಲಕ ಬಂಡವಾಳಿಗರನ್ನು ಗ್ರಾಮ ಪಂಚಾಯಿತಿಗಳಿಗೂ ತುರುಕುವ ಹುನ್ನಾರ ನಡೆಯುತ್ತಿದೆ.

ನಮ್ಮ ಸಂವಿಧಾನವು ಬದುಕುವ ಹಕ್ಕನ್ನು ಮೂಲಭೂತ ಹಕ್ಕಾಗಿ ಖಚಿತಪಡಿಸಿದೆ. ಆದರೆ ಬದುಕುವ ಹಕ್ಕು ವಾಸ್ತವವಾಗಿ ಖಾತ್ರಿಯಾಗಬೇಕಾದರೆ ಉದ್ಯೋಗದ ಹಕ್ಕು ಅವಶ್ಯಕ.

ಈ ಸತ್ಯದ ಬಗ್ಗೆ ಸಂವಿಧಾನದ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಸಂಪೂರ್ಣ ಅರಿವಿತ್ತು. ಆದರೆ ಸಂವಿಧಾನವನ್ನು ಸ್ವೀಕರಿಸಿದ 1950ರ ಜನವರಿ 26ರಿಂದಲೇ ಉದ್ಯೋಗದ ಹಕ್ಕನ್ನು ತಕ್ಷಣ ಜಾರಿಗೊಳಿಸುವುದು ವ್ಯಾವಹಾರಿಕವಾಗಿರಲಿಲ್ಲ. ಆದ್ದರಿಂದ ಅದನ್ನು ಸಂವಿಧಾನದ ನೀತಿ ನಿರ್ದೇಶಕ ತತ್ವಗಳಲ್ಲಿ ಸೇರಿಸಿ, ಸರ್ಕಾರವು ಆದಷ್ಟು ಬೇಗ ಉದ್ಯೋಗದ ಹಕ್ಕು ಜನರಿಗೆ ಲಭ್ಯವಾಗುವಂತೆ ಸೂಕ್ತ ನೀತಿ-ದೋರಣೆಗಳನ್ನು ರೂಪಿಸಬೇಕು ಎಂದು ಸೂಚಿಸಲಾಗಿತ್ತು.

ಈ ಹಿನ್ನೆಲೆಯಲ್ಲೇ 2005ರಲ್ಲಿ ಜಾರಿಗೆ ಬಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಒಂದು ಮಹತ್ವದ ಮೊದಲ ಹೆಜ್ಜೆಯಾಗಿತ್ತು. ಸಂವಿಧಾನ ಸ್ವೀಕಾರದ 55 ವರ್ಷಗಳ ನಂತರ, ಜನ ಸಂಘಟನೆಗಳು ಹಾಗೂ ಚಳವಳಿಗಳ ಒತ್ತಡದ ಫಲವಾಗಿ ಆಗಿನ ಕಾಂಗ್ರೆಸ್ ಸರ್ಕಾರ ಈ ಕಾನೂನನ್ನು ಜಾರಿಗೆ ತಂದಿತು.

ಲೋಕಸಭೆಯಲ್ಲಿ ಸುದೀರ್ಘ ಚರ್ಚೆಯ ಬಳಿಕ, ಎಲ್ಲ ಪಕ್ಷಗಳ ಸದಸ್ಯರು ಒಮ್ಮತದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನನ್ನು ಅಂಗೀಕರಿಸಿ ಇತಿಹಾಸ ನಿರ್ಮಿಸಿದರು.

ಹಾಗಿದ್ದರೆ ಈ ಕಾನೂನು ಪರಿಪೂರ್ಣವಾಯಿತೇ? ಖಂಡಿತವಾಗಿಯೂ ಇಲ್ಲ. ಮಾನವ ಹಕ್ಕುಗಳು ಯಾವಾಗಲೂ ಪ್ರತಿ ವ್ಯಕ್ತಿಗೆ ಸಲ್ಲುವ ಹಕ್ಕುಗಳಾಗಿರಬೇಕು. ಆದರೆ ಈ ಕಾನೂನು ಪ್ರತಿ ವರ್ಷ ಒಂದು ಗ್ರಾಮೀಣ ಕುಟುಂಬಕ್ಕೆ 100 ದಿನಗಳ ಉದ್ಯೋಗದ ಖಾತ್ರಿ ಮಾತ್ರ ನೀಡುತ್ತಿತ್ತು. ನಮ್ಮ ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ 1978ರಿಂದಲೇ ಉದ್ಯೋಗ ಖಾತ್ರಿ ಕಾನೂನಿನ ಅಡಿಯಲ್ಲಿ ಪ್ರತಿ ವ್ಯಕ್ತಿಗೆ 365 ದಿನಗಳ ಉದ್ಯೋಗದ ಹಕ್ಕು ನೀಡುವ ಕಾನೂನು ಜಾರಿಯಲ್ಲಿದೆ. ಈ ರೀತಿಯ ಕುಂದುಕೊರತೆಗಳನ್ನು ಸೂಚಿಸಬಹುದು. ಆದರೆ ಗ್ರಾಮೀಣ ಉದ್ಯೋಗ ಸೃಷ್ಟಿ ಹಾಗೂ ಉತ್ಪಾದಕ ಸ್ಥಿರ ಆಸ್ತಿ ನಿರ್ಮಾಣಈ ಎರಡೂ ಗುರಿಗಳನ್ನು ಈಡೇರಿಸುವ ನಿಟ್ಟಿನಲ್ಲಿ ಈ ಕಾನೂನು ಕ್ರಾಂತಿಕಾರಿ ಹೆಜ್ಜೆಯಾಗಿತ್ತು.

ಈ ಕಾನೂನು ಜಾರಿಯಾದ ದಿನದಿಂದಲೇ ಬಂಡವಾಳಶಾಹಿಗಳು ಹಾಗೂ ಅವರ ಬಾಲಬಡಕರಾದ ಕೆಲ ಮಧ್ಯಮವರ್ಗದ ವಿಚಾರವಂತರು, ನಮ್ಮ ದೇಶವು ಇದರಿಂದ ದಿವಾಳಿಯಾಗುತ್ತದೆಂದು ಗುಲ್ಲೆಬ್ಬಿಸಿದ್ದರು. ಸ್ತ್ರೀಪುರುಷರಿಗೆ ಸಮಾನ ಕೂಲಿಯ ಖಾತ್ರಿ, ಗ್ರಾಮೀಣ ಶ್ರಮಿಕರಿಗೆ ದೊರಕಿದ ಪರಿಣಾಮ ಒಟ್ಟಾರೆ ಕೂಲಿ ದರ ಏರಿಕೆಯಾಗಿ ಮಾಲೀಕರಿಗೆ ಹೊಟ್ಟೆನೋವು ಶುರುವಾಯಿತು. ಬಂಡವಾಳದ ಕೈಗಾರಿಕೋದ್ಯಮಿಗಳಿಗೆ ಸವಲತ್ತು, ಸಬ್ಸಿಡಿ, ಸಾಲಮನ್ನ ಮುಂತಾದ ಬಕ್ಷಿಸ್‌ಗಳನ್ನು ನೀಡುವ ಸರ್ಕಾರಗಳ ವಿರುದ್ಧ ಪಟ್‌ಪಿಟ್ ಎನ್ನದ ಮಾಧ್ಯಮಗಳು, ಗ್ರಾಮೀಣ ಕೂಲಿಕಾರರಿಗೆ ಉದ್ಯೋಗದ ಹಕ್ಕು ನೀಡಲು ಈ ಕಾನೂನಿಗೆ ಮೀಸಲಿಟ್ಟ ಸಣ್ಣ ಮೊತ್ತದ ಮೇಲೆಯೇ ನಿರಂತರ ತಕರಾರು ಮಾಡುತ್ತಲೇ ಬಂದವು.

ಆದರೆ ವರ್ಷಗಳು ಕಳೆದಂತೆ ಗ್ರಾಮೀಣ ಉದ್ಯೋಗ ಖಾತರಿಗಾಗಿ ಬಜೆಟ್ ಮೊತ್ತ ಹೆಚ್ಚುತ್ತಲೇ ಹೋಯಿತು. ದೇಶ ದಿವಾಳಿಯಾಗುವ ಬದಲು, ಗ್ರಾಮೀಣ ಜನಜೀವನದಲ್ಲಿ ಸ್ಪಷ್ಟ ಸುಧಾರಣೆ ಕಂಡುಬಂದಿತು. ಆಫ್ರಿಕಾದ ದೇಶಗಳೂ ಕೂಡ ಈ ಕಾನೂನಿನ ಅಧ್ಯಯನಕ್ಕಾಗಿ ಭಾರತಕ್ಕೆ ಬರತೊಡಗಿದವು.

ಕಳೆದ 20 ವರ್ಷಗಳಲ್ಲಿ ಈ ಕಾನೂನು ಕೋಟ್ಯಂತರ ಮಾನವದಿನಗಳ ಉದ್ಯೋಗ ಸೃಷ್ಟಿಸಿದೆ. ನೀರು, ಮಣ್ಣು, ಕೃಷಿ, ಅರಣ್ಯ, ಜಾನುವಾರುಗಳ ಸಂರಕ್ಷಣೆ ಹಾಗೂ ಅವುಗಳ ಅಭಿವೃದ್ಧಿಯಲ್ಲಿ ಸಾಧಿಸಿದ ಪ್ರಗತಿ ಅಷ್ಟಿಷ್ಟಲ್ಲ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾನೂನು, ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ವಲಸೆ ಹೋಗುತ್ತಿದ್ದ ಲಕ್ಷಾಂತರ ಜನರ ಬದುಕನ್ನು ಸ್ಥಿರಗೊಳಿಸಿದೆ.

ಆದರೆ ಈ ಕಾನೂನು ಸರಿಯಾಗಿ ಅನುಷ್ಠಾನಗೊಂಡಿತೇ? ಖಂಡಿತವಾಗಿಯೂ ಇಲ್ಲ. ಅನೇಕ ಲೋಪದೋಷಗಳು ಇದ್ದವು. ಕಾನೂನು ಜಾರಿಯಾದ 45 ವರ್ಷಗಳಲ್ಲೇ ಗ್ರಾಮ ಪಂಚಾಯಿತಿ ಪದಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭ್ರಷ್ಟಾಚಾರದ ಹೊಸಹೊಸ ವಿಧಾನಗಳನ್ನು ಕಂಡುಕೊಂಡರು. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ಕಾಂಟ್ರ್ಯಾಕ್ಟರ್‌ಗಳ ಮೂಲಕ ಯಂತ್ರಗಳನ್ನು ಬಳಸಿಕೊಂಡು ಕೆಲಸ ಮಾಡಿಸಿಕೊಂಡು ಹಣವನ್ನು ಜೇಬಿಗೆ ಹಾಕುವ ದಂಧೆಗಳು ನಡೆದಿವೆ.

ಈ ರೀತಿಯ ಭ್ರಷ್ಟಾಚಾರವನ್ನು ತಡೆಯಬೇಕೆಂದು ಮನರೆಗಾ ಕೂಲಿಕಾರರ ಸಂಘಟನೆಗಳು ಹೋರಾಟ ನಡೆಸಿವೆ. ನಮ್ಮ ಘನ ಸರ್ಕಾರಗಳು ರಾಜಕೀಯ ಬದ್ಧತೆ ತೋರಿದ್ದರೆ ಈ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವಿತ್ತು. ಆದರೆ ಅದನ್ನು ಮಾಡದೆ, ಈಗ ನಮ್ಮ ಒಕ್ಕೂಟದ ಮೋದಿ ಸರ್ಕಾರವು ಮನರೇಗಾವನ್ನೇ ರದ್ದುಗೊಳಿಸಿದೆ.

ಕೇವಲ ಅದರ ಹೆಸರನ್ನು ಬದಲಿಸಿ ವಿಬಿಜಿ ರಾಮ್ ಜಿ(ವಿಕಸಿತ್ ಭಾರತ ಗ್ಯಾರಂಟಿ ಫಾರ್ ರೋಜಗಾರ ಆಂಡ್ ಆಜೀವಿಕಾ ಮಿಷನ್ ಗ್ರಾಮೀಣ) ಎಂಬ ಹೆಸರಿನ ಉದ್ಯೋಗ ಯೋಜನೆಯನ್ನು ತಂದಿರುವುದಾಗಿ ಹೇಳಲಾಗುತ್ತಿದೆ. ಇದಲ್ಲದೆ, 100 ದಿನಗಳ ಬದಲಾಗಿ ವರ್ಷಕ್ಕೆ 125 ದಿನ ಉದ್ಯೋಗ ನೀಡಲಾಗುತ್ತದೆ ಎಂದು ಡಿಂಡಿಮ ಬಾರಿಸಲಾಗುತ್ತಿದೆ. ಆದರೆ ಇಲ್ಲಿ ಉದ್ಯೋಗದ ಖಾತ್ರಿ ಇಲ್ಲ.

ಯಾಕೆಂದರೆ ಮನರೇಗಾದಲ್ಲಿ ಒಕ್ಕೂಟ ಸರ್ಕಾರದ ಬಜೆಟ್‌ಗೆ ಯಾವುದೇ ಮಿತಿ ಇರಲಿಲ್ಲ. ದೇಶದ ಗ್ರಾಮೀಣ ಭಾಗದ ಯಾರೇ ಆಗಲಿ ಉದ್ಯೋಗ ಕೇಳಿದಲ್ಲಿ, 100 ದಿನಗಳವರೆಗೆ ಉದ್ಯೋಗ ಒದಗಿಸುವ ಹೊಣೆಗಾರಿಕೆ ಸರ್ಕಾರದ ಮೇಲಿತ್ತು. ಆದರೆ ರಾಮ್ ಜಿ ಯೋಜನೆಯಲ್ಲಿ ಅದು ಇಲ್ಲ. ದಿಲ್ಲಿ ಸರ್ಕಾರದ ಅಭಿವೃದ್ಧಿ ಯೋಜನೆ ಗುರುತಿಸಿದ ಪ್ರದೇಶಗಳಲ್ಲಿ, ನಿರ್ದಿಷ್ಟ ಕಾಮಗಾರಿಗಳಿಗೆ ಮಾತ್ರ ಸೀಮಿತ ಹಣಕಾಸು ವ್ಯವಸ್ಥೆ ಇದೆ.

ಅಷ್ಟೇ ಅಲ್ಲ, ಮನರೇಗಾದಲ್ಲಿ ಕೂಲಿ ಹಣವನ್ನು ಶೇ. 100ರಷ್ಟು ಒಕ್ಕೂಟ ಸರ್ಕಾರವೇ ನೀಡುತ್ತಿತ್ತು. ಈಗ ಹೊಸ ಕಾನೂನಿನಂತೆ ಒಕ್ಕೂಟ ಸರ್ಕಾರ ಕೇವಲ ಶೇ.60ರಷ್ಟು ಮಾತ್ರ ಒದಗಿಸುತ್ತದೆ; ಉಳಿದ 40ರಷ್ಟು ಹಣವನ್ನು ರಾಜ್ಯ ಸರ್ಕಾರಗಳು ನೀಡಬೇಕಾಗಿದೆ. ಜಿಎಸ್‌ಟಿ ಪಾಲು ಸರಿಯಾಗಿ ದೊರೆಯುತ್ತಿಲ್ಲವೆಂದು ರಾಜ್ಯ ಸರ್ಕಾರಗಳು ಈಗಾಗಲೇ ಬೊಬ್ಬೆ ಹೊಡೆಯುತ್ತಿರುವಾಗ, ಸಾಲದ ಭಾರದಲ್ಲಿ ಸೊರಗಿರುವ ರಾಜ್ಯ ಸರ್ಕಾರಗಳು ಈ ಶೇ.40ರಷ್ಟು ಹೊರೆ ಹೊರುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಬಡಜನರ ಉದ್ಯೋಗದ ಹಕ್ಕನ್ನು ನಿರಾಕರಿಸುವ ಉದ್ದೇಶದಿಂದಲೇ ಈ ಹೊಸ ಕಾನೂನು ರೂಪಿಸಲಾಗಿದೆ.

ಮೋದಿ ಸರ್ಕಾರ ಉದ್ಯೋಗದ ಹಕ್ಕನ್ನು ಕೈಬಿಟ್ಟಿದ್ದು ಯಾಕೆ?

ಮನರೇಗಾ ಕಾನೂನಿನಿಂದಾಗಿ ಕೇವಲ ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣ ಸ್ಥಿರ ಉತ್ಪಾದಕ ಆಸ್ತಿ ನಿರ್ಮಾಣವಷ್ಟೇ ಅಲ್ಲ, ಇನ್ನೂ ಅನೇಕ ತಾತ್ವಿಕ ಅಂಶಗಳು ಕಾರ್ಯರೂಪಕ್ಕೆ ಬಂದವು.

ಮನರೇಗಾ ಕಾನೂನಿನ ಪರಿಣಾಮವಾಗಿ: ಗ್ರಾಮಸಭೆಗಳಲ್ಲಿ ಇವರೆಗೆ ಕೇವಲ 810 ಫಲಾನುಭವಿಗಳು ಮಾತ್ರ ಭಾಗವಹಿಸುತ್ತಿದ್ದ ಸ್ಥಿತಿಗೆ ಬದಲಾಗಿ, ಈಗ ನೂರಾರು ಕೂಲಿಕಾರರು, ಮಹಿಳೆಯರು, ದಲಿತರು ಹಾಗೂ ಹಿಂದುಳಿದ ವರ್ಗದ ಜನರು ಭಾಗವಹಿಸಿ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಾವೇ ನಿರ್ಧರಿಸಲು ಆರಂಭಿಸಿದರು.

ಚಿಕ್ಕ ಹಿಡುವಳಿದಾರರ ಸ್ವಂತ ಭೂಮಿಯಲ್ಲಿ ಕೃಷಿ ಹೊಂಡ, ಭೂಮಿ ಸಮತಲೀಕರಣ ಮುಂತಾದ ಕೆಲಸಗಳು ನಡೆದಿದ್ದು, ಬಡ ರೈತರ ಉತ್ಪಾದಕತೆ ಹೆಚ್ಚಳ ಕಂಡಿತು. ಕೃಷಿ ಕಾರ್ಮಿಕರು ಸಂಘಟಿತರಾಗುವ ಅವಕಾಶ ದೊರಕಿತು(ಕರ್ನಾಟಕದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಗಳಾದ ಗ್ರಾಕೂಸ್ ಮೊದಲಾದವುಗಳು ಲಕ್ಷಾಂತರ ಕೂಲಿಕಾರರನ್ನು ಸಂಘಟಿಸಿದ್ದು ಐತಿಹಾಸಿಕ ಬೆಳವಣಿಗೆಯಾಗಿದೆ).

ಪಂಚಾಯತ್ ಮಟ್ಟದ ನಿರ್ಧಾರ ಪ್ರಕ್ರಿಯೆಗಳಲ್ಲಿ ಕೂಲಿಕಾರರು, ಮಹಿಳೆಯರು, ದಲಿತರು ಹಾಗೂ ಹಿಂದುಳಿದ ವರ್ಗಗಳ ಸಹಭಾಗಿತ್ವ ಗಮನಾರ್ಹವಾಗಿ ಹೆಚ್ಚಿತು. ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯನ್ನು ಮಾಡಿತು.

ಈ ಎಲ್ಲ ಬೆಳವಣಿಗೆಗಳು ಮಹಾತ್ಮ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯೊಂದಿಗೆ ಹೊಂದಿಕೆಯಾಗುತ್ತವೆ. ಗಾಂಧೀಜಿ ಅಂತ್ಯೋದಯದಿಂದ ಸರ್ವೋದಯದ ಆರಂಭವಾಗಬೇಕು ಎಂದು ಹೇಳಿದ್ದರು. ಉದ್ಯೋಗ ಖಾತ್ರಿ ಯೋಜನೆ ಈ ಎರಡೂ ತಾತ್ವಿಕ ಅಂಶಗಳನ್ನು ಒಳಗೊಂಡಿತ್ತು.

ದೇಶದ ಎಲ್ಲ ಪ್ರಕೃತಿ ಸಂಪತ್ತನ್ನು ಬಂಡವಾಳಶಾಹಿಗಳಿಗೆ ಧಾರೆ ಎರೆಯುತ್ತಿರುವ ಮೋದಿ ಸರ್ಕಾರಕ್ಕೆ ಈ ರೀತಿಯ ಜನಪರ ಬೆಳವಣಿಗೆಗಳು ಹೇಗೆ ರುಚಿಸಬೇಕು? ಅದಾನಿ, ಅಂಬಾನಿ ಮೊದಲಾದ ಬಂಡವಾಳಶಾಹಿಗಳ ನಿರಂತರ ಒತ್ತಡದ ಪರಿಣಾಮವಾಗಿ, ಈ ಕಾನೂನನ್ನು ರದ್ದುಪಡಿಸುವ ಸಂಚು ನಡೆದಿರುವುದು ಸ್ಪಷ್ಟ. ಸರ್ಕಾರ ತನ್ನ ಸ್ವಾಭಾವಿಕ ಕಾರ್ಯಪದ್ಧತಿಯಾದ ಮೋಸಗಾರಿಕೆಯನ್ನು ಅಳವಡಿಸಿಕೊಂಡು, 100 ದಿನಗಳ ಉದ್ಯೋಗವನ್ನು 125 ದಿನಗಳಿಗೆ ವಿಸ್ತರಿಸುವುದಾಗಿ ಹಾಗೂ ಪಾರದರ್ಶಕ ಆಡಳಿತಕ್ಕಾಗಿ ವಿಬಿಜಿ ರಾಮ್ ಜಿ ಕಾನೂನು ತರುವುದಾಗಿ ಹೇಳಿ, ಮೊದಲಿನ ಉದ್ಯೋಗ ಖಾತ್ರಿ ಕಾನೂನನ್ನೇ ರದ್ದುಗೊಳಿಸಿದೆ. ಇದರ ಪರಿಣಾಮವಾಗಿ ಉದ್ಯೋಗ ಮುಂದಿನ ದಿನಗಳಲ್ಲಿ ರಾಮಭರೋಸೆ ಆಗಲಿದೆ.

ಕಾರ್ಪೊರೇಟ್ ಲಾಭಕ್ಕೆ ಅನುಕೂಲ ಒದಗಿಸಲು ಸರ್ಕಾರ ರೈತ ವಿರೋಧಿ ಮೂರು ಕೃಷಿ ಕಾನೂನುಗಳನ್ನು ಜಾರಿಗೆ ತಂದಾಗ, ರೈತರು ದಿಲ್ಲಿಯ ಅಂಗಳದಲ್ಲಿ ಸುದೀರ್ಘ ಹೋರಾಟ ನಡೆಸಿ, 600ಕ್ಕೂ ಹೆಚ್ಚು ಹುತಾತ್ಮರ ಬಲಿದಾನದೊಂದಿಗೆ ಆ ಕಾನೂನುಗಳನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು. ಅದೇ ರೀತಿಯಲ್ಲಿ ಗ್ರಾಮೀಣ ಕೂಲಿಕಾರರೂ ಕೂಡ ಸಂಘಟಿತರಾಗಿ, ಒಗ್ಗಟ್ಟು ತೋರಿಸಿ ತಮ್ಮ ಉದ್ಯೋಗದ ಹಕ್ಕನ್ನು ಕಾಪಾಡಿಕೊಳ್ಳಬೇಕಿದೆ.

ಮೋದಿ ಸರ್ಕಾರಕ್ಕೆ ಪ್ರೀತಿ ಇರುವುದು ಕೇಂದ್ರಿತ ವ್ಯವಸ್ಥೆಗೆ, ಕಾರ್ಪೊರೇಟ್ ಹಿತರಕ್ಷಣೆಗೆ, ವರ್ಣಾಶ್ರಮ ಆಧಾರಿತ ಹಿಂದುತ್ವಕ್ಕೆ ಹಾಗೂ ಸ್ವದೇಶಿಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಅಭಿವೃದ್ಧಿಗೆ. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ವರ್ಗ, ಮಹಿಳೆಯರು, ದಲಿತರು ಜಾಗೃತರಾಗಿ ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗಾಗಿ ಹಾಗೂ ನಿಜವಾದ ಜನತಂತ್ರದ ಅನುಷ್ಠಾನಕ್ಕಾಗಿ ಮುನ್ನಡೆಯುವುದಾದರೆ ಬಂಡವಾಳವಾಹಿಗಳ ಹಿತರಕ್ಷಣೆ ಹೇಗೆ ಸಾಧ್ಯ?

ಮನರೇಗಾದಿಂದ ಬೃಹತ್ ಬಂಡವಾಳವಾಹಿಗಳ ಹಿತರಕ್ಷಣೆ ಸಾಧ್ಯವಾಗುತ್ತಿಲ್ಲ. ಇದು ಬಡವರ ಹಕ್ಕಾಗಿರುವುದರಿಂದ ಉದ್ಯಮಿಗಳ ಪಾಲು ಮಾಡಲಾಗುವುದಿಲ್ಲ. ಏಕೆಂದರೆ ಈ ಕಾನೂನು ರಾಜ್ಯಗಳ ಹಿಡಿತದಲ್ಲಿದೆ. ಅದಕ್ಕಾಗಿಯೇ ಕೇಂದ್ರ ಗಾಂಧಿ ಹೆಸರಿನ ಉದ್ಯೋಗ ಖಾತ್ರಿ ಕಾನೂನನ್ನು ತೆಗೆದು ಹಾಕಿ, ಇದನ್ನು ರಾಮನ ಹೆಸರಿನಲ್ಲಿ ತನ್ನ ತೆಕ್ಕೆಗೆ ತೆದುಕೊಂಡು ಬಡವರ ಮೂಗಿಗೆ ತುಪ್ಪ ಹಚ್ಚುವ ಸುಳ್ಳು ಉದ್ಯೋಗ ಭರವಸೆಯ ಕಾನೂನನ್ನು ಜಾರಿಗೆ ತಂದು, ಗ್ರಾಮೀಣ ಕೂಲಿಕಾರರನ್ನು ಮೋಸಗೊಳಿಸುವ ಕುತಂತ್ರಕ್ಕೆ ಈ ಸರ್ಕಾರ ಕೈ ಹಾಕಿದೆ. ಈ ಮೂಲಕ ಬಂಡವಾಳಿಗರನ್ನು ಗ್ರಾಮ ಪಂಚಾಯತ್‌ಗಳಿಗೂ ತುರುಕುವ ಹುನ್ನಾರ ನಡೆಯುತ್ತಿದೆ.

ಮನರೇಗಾ ಸಮರ್ಪಕ ಅನುಷ್ಠಾನಕ್ಕೆ ಗ್ರಾಕೂಸ ಒತ್ತಾಯ: ಪ್ರಧಾನಿಗೆ ಮನವಿ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ(ಗ್ರಾಕೂಸ) ಸಮಿತಿಯಿಂದ ವಿಬಿ- ಜಿ ರಾಮ್ ಜಿ ವಿರೋಧಿಸಿ ಮನರೇಗಾ(ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ) ಕಾಯ್ದೆಯನ್ನು ಸಮರ್ಪಕ ಅನುಷ್ಠಾನಕ್ಕೆ ಒತ್ತಾಯಿಸಿ ಪ್ರತಿಭಟನೆ ಮಾಡಿದರು.

ಬಳಿಕ ಪ್ರತಿಭಟನಾಕಾರರು ತಾಲೂಕಿನ ಮಮಟಗೇರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮುಖಾಂತರ ಪ್ರಧಾನ ಮಂತ್ರಿ ಮೋದಿಯವರಿಗೆ ಮನವಿ ಸಲ್ಲಿಸಿದರು.

''ಮನರೇಗಾ ದೇಶದ ಎಲ್ಲ ಗ್ರಾಮೀಣ ಜನರಿಗೂ ಉದ್ಯೋಗದ ಹಕ್ಕಾಗಿದೆ. ಜನರಿಗೆ ತಾವಿರುವ ಪ್ರದೇಶದಲ್ಲೇ ನೂರು ದಿನಗಳ ಕೆಲಸ ಕೇಳಿ ಪಡೆಯುವ ಅವಕಾಶವಿತ್ತು. ವಲಸೆಯಿಂದ ಮರಳಿದವರೂ ಕೂಡ ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ಪಡೆಯಬಹುದಾಗಿತ್ತು'' ಎಂದರು.

''ವಿಬಿ-ಗ್ರಾಮ್ ಜಿ ಕಾನೂನಿನ(ಪರಿಚ್ಛೇದ 5(1)ರ ಪ್ರಕಾರ, ಕೇಂದ್ರ ಸರ್ಕಾರ ತನ್ನಿಚ್ಛೆಯಂತೆ ನೋಟಕ್ಕೆ ಮಾಡಿ ಬಜೆಟ್ ನೀಡುವ ಪ್ರದೇಶಗಳಲ್ಲಿ ಮಾತ್ರ ಇದು ಜಾರಿಯಲ್ಲಿರುತ್ತದೆ. ಇದರರ್ಥ, ದೇಶದ ಎಲ್ಲ ಜನರಿಗೂ, ಎಲ್ಲ ಕಡೆಯೂ ಉದ್ಯೋಗ ಒಂದು ಹಕ್ಕಾಗಿ ಉಳಿಯುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಉದ್ಯೋಗದ ಖಾತರಿಯೇ ಇರುವುದಿಲ್ಲ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮನರೇಗಾ ಅನುಷ್ಠಾನಕ್ಕೆ ಗ್ರಾಕೂಸ ಒತ್ತಾಯ

''ಮನರೇಗಾದಲ್ಲಿ ತಮಗೆ ಬೇಕಾದಾಗ ಗ್ರಾಮೀಣ ಭಾಗದ ಎಷ್ಟು ಜನ ಬೇಕಾದರೂ ಕೆಲಸಕ್ಕೆ ಅರ್ಜಿ ಹಾಕಬಹುದಾಗಿತ್ತು. ಅರ್ಜಿ ಹಾಕಿದ ಹದಿನೈದು ದಿನದೊಳಗೆ ಕೆಲಸ ನೀಡುವುದು ಸರ್ಕಾರದ ಕರ್ತವ್ಯವಾಗಿದ್ದು, ಕೂಲಿ ಹಣ ಪಾವತಿಸುವ ಹೊಣೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದ್ದಾಗಿತ್ತು. ಬಜೆಟ್‌ಗೆ ಇಂತಿಷ್ಟೇ ಎಂಬ ಮಿತಿ ಇರಲಿಲ್ಲ. ಬೇಡಿಕೆ ಇದ್ದಷ್ಟು ಬಜೆಟ್ ಪೂರೈಸುವುದು ಕೇಂದ್ರ ಸರ್ಕಾರದ ಹೊಣೆಯಾಗಿತ್ತು'' ಎಂದರು.

''ವಿಬಿ-ಜಿ ರಾಮ್ ಜಿ ಕಾನೂನಿನ ಪರಿಚ್ಛೇದ 4(5), 4(6)ರ ಪ್ರಕಾರ, ಪ್ರತಿಯೊಂದು ವಿತ್ತ ವರ್ಷಕ್ಕೂ ಆಯಾ ರಾಜ್ಯಕ್ಕೆ ಎಷ್ಟು ಹಣವನ್ನು ಕೊಡಮಾಡಬೇಕು ಎಂಬುದನ್ನು ಕೇಂದ್ರ ಸರ್ಕಾರ ತನ್ನದೇ ಅಳತೆಗೋಲಿನ ಮೇಲೆ ನಿರ್ಧರಿಸುತ್ತದೆ. ಅಂದರೆ ಯಾವ ವರ್ಷ ಯಾವ ಪಂಚಾಯಿತಿಗೆ ಎಷ್ಟು ಹಣ ನೀಡಬೇಕು ಎಂಬುದು ಕೇಂದ್ರ ಸರ್ಕಾರದ ನಿರ್ಧಾರವಾಗಿರುತ್ತದೆ. ಅಂದರೆ ಆಯಾ ರಾಜ್ಯಕ್ಕೆ ಕೇಂದ್ರ ಸರ್ಕಾರ ನಿಗದಿ ಮಾಡಿದ ಬಜೆಟ್‌ಗೆ ಅನುಗುಣವಾಗಿಯೇ ಪಂಚಾಯಿತಿಗಳು ಉದ್ಯೋಗ ಕೊಡಬೇಕು. ಮನರೇಗಾ ಕಾನೂನಿನಲ್ಲಿದ್ದ ಬೇಡಿಕೆ ಇದ್ದಲ್ಲಿ ಕೆಲಸ ಕೊಡು, ಕೂಲಿಕೊಡು ಎನ್ನುವುದು ಹೋಗಿ ಈಗ ಕೇಂದ್ರ ದಯಪಾಲಿಸಿದರೆ ಮಾತ್ರ ಕೆಲಸ ಎಂದಾಗುತ್ತದೆ'' ಎಂದು ಹೇಳಿದರು.

''ಮನರೇಗಾದಲ್ಲಿ ಕೆಲಸ ಕೊಡುವ ಜವಾಬ್ದಾರಿ ಪಂಚಾಯಿತಿಯೆಂದರೆ ರಾಜ್ಯ ಸರ್ಕಾರದ್ದು, ಕೆಲಸಗಾರರ ಕೂಲಿಯ ಸಂಪೂರ್ಣ ಮೊತ್ತವನ್ನು ಮತ್ತು ಸಾಮಗ್ರಿ-ಸಲಕರಣೆಗಳ ವೆಚ್ಚದ ಶೇ.75ರಷ್ಟು ಹಣವನ್ನು ಕೇಂದ್ರ ಸರ್ಕಾರವೇ ಭರಿಸಬೇಕಾಗಿತ್ತು. ವಿಬಿ-ಜಿ ರಾಮ್ ಜಿ ಕಾನೂನಿನ ಪರಿಚ್ಛೇದ 22(2)ರ ಪುಕಾರ, ಕೇಂದ್ರ ಮತ್ತು ರಾಜ್ಯಗಳ ನಡುವೆ ವೆಚ್ಚದ ಹಂಚಿಕೆಯ ಪ್ರಮಾಣ 60:40 ಇರುತ್ತದೆ. ರಾಜ್ಯ ಸರ್ಕಾರಗಳ ಮೇಲೆ ಇಷ್ಟು ದೊಡ್ಡ ಹೊರ ಹೊರೆಸುವುದರಿಂದ ಕೂಲಿ ಪಾವತಿಯಲ್ಲಿ ಆಗುವ ವಿಳಂಬ, ಅನಿಶ್ಚಿತತೆಗಳು ನಿತ್ಯದ ಗೋಳಾಗುತ್ತದೆ. ಕೂಲಿಯನ್ನೂ ತಾನೇ ಕೊಡಬೇಕಾಗಿ ಬಂದಾಗ ರಾಜ್ಯ ಸರ್ಕಾರವು ಕೆಲಸ ಕೊಡುವುದನ್ನೇ ಕಡಿಮೆ ಮಾಡಬಹುದು'' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಫಕೀರವ್ವ, ಲಕ್ಷಮವ್ವ, ಪ್ರಭಾವತಿ, ಶಿವಬಾಯವ್ವ, ಹನಮವ್ವ, ಗೌರಮ್ಮ, ಮೀನಾಕ್ಷಿ, ಶಿವನಗೌಡ ಕರಿಗೌಡ, ಯಲ್ಲಪ್ಪ, ಈರಮ್ಮ, ಶಿವಕ್ಕ, ಶಂಕ್ರವ್ವ, ಪಾರ್ವತವ್ವ, ಲಕ್ಕವ್ವ, ಗೀತಾ ಹಾಗೂ ಶಿಲ್ಪಾ ಇದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR